ಡಿಸ್‌ಕನೆಕ್ಟ್ ಮಾಡಿಸುವುದಕ್ಕೆ ನಿಮಗೆ ಅಧಿಕಾರವಿದೆಯೇ? ನೀವು ಸರ್ಕಾರ ನಡೆಸುವ ರೀತಿಯೇ ಇದು.

ಅಧ್ಯಕ್ಷರು : ಆಲ್‌ರೈಟ್, ಅದರ ಬಗ್ಗೆ ಡೀಟೈಲ್ಸ್ ಏನಿದೆಯೋ ಅದನ್ನು ಕೊಡಿಸೋಣ ಬಿಡಿ. ಯೋಗೀಶ್ ಭಟ್ ಈಗ ನೀವೇನೋ ಹೇಳಬೇಕು ಎಂದಿದ್ದೀರಲ್ಲಾ, ಅದನ್ನು ಹೇಳಿ.

ಕೆ.ಪಿ.ಎಸ್.ಸಿ. ಸೆಂಟರನ್ನು ಮಂಗಳೂರಿನಲ್ಲಿ ತೆರೆಯುವುದು

ಶ್ರೀ ಎನ್. ಯೋಗೀಶ್ ಭಟ್ : ಸರ್ಕಾರ ಕೆ.ಪಿ.ಎಸ್.ಸಿ ವತಿಯಿಂದ ಕೆ.ಎ.ಎಸ್. ಪರೀಕ್ಷೆಯನ್ನು ನಡೆಸುತ್ತಿರುವುದು ಸರಿಯಷ್ಟೆ. ಈ ಪರೀಕ್ಷೆಗೆ ರಾಜ್ಯಾದ್ಯಂತ ಸಾವಿರಾರು ವಿದ್ಯಾರ್ಥಿಗಳು ಕುಳಿತಿರುತ್ತಾರೆಯಾದ ಕಾರಣ ಕೊಡಗು ಮತ್ತು ಮಲೆನಾಡಿನ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮಂಗಳೂರಿನಲ್ಲೂ ಕೂಡ ಒಂದು ಪರೀಕ್ಷಾ ಉಪಕೇಂದ್ರವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸರ್ಕಾರ ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾಧುಸ್ವಾಮಿಯವರು ಎತ್ತಿದ ವಿಚಾರಕ್ಕೆ ಮಂತ್ರಿಗಳಿಂದ ಉತ್ತರ ಬರಲಿಲ್ಲ. ಮಂತ್ರಿಗಳೇ ಕೆ.ಇ.ಬಿ ಕಛೇರಿ ಮುಂದೆ ಧರಣಿ ಮಾಡುವುದು ಎಂದರೆ ಹೇಗೆ ಅಧ್ಯಕ್ಷರೇ, ಶಾಸಕರು ಧರಣಿ ಮಾಡುವುದನ್ನು ಎಲ್ಲರೂ ಕೇಳಿರುತ್ತಾರೆ, ಆದರೆ ಸರ್ಕಾರದ ಮಂತ್ರಿಯೇ ಹೀಗೆ ಮಾಡಿದರೆ ಹೇಗೆ? ಆದುದರಿಂದ ಅದರ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಅಧ್ಯಕ್ಷರು : ಮಾನ್ಯ ಸತ್ಯನಾರಾಯಣರವರೇ ಸದನಕ್ಕೆ ಬಂದಾಗ ಅದರ ಬಗ್ಗೆ ಹೇಳುತ್ತಾರೆ. ಏಕೆಂದರೆ ಅವರೇ ಧರಣಿಯನ್ನು ಮಾಡಿದರೋ ಅಥವಾ ಧರಣಿಯನ್ನು ಮಾಡುತ್ತಿದ್ದ ಜಾಗಕ್ಕೆ ಮಂತ್ರಿಗಳು ಹೋಗಿದ್ದರೋ ಎಂಬ ಬಗ್ಗೆ ಅವರನ್ನು ಕರೆಸಿ ಆಮೇಲೆ ಹೇಳಿಕೆ ಮಾಡಿಸೋಣ ಬಿಡಿ. ಇದನ್ಯಾಕೆ ಮತ್ತೆ ಚರ್ಚೆ ಮಾಡುತ್ತಾ ಹೋಗುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಆಯಿತು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ. ಗೌರವಾನ್ವಿತ ಸದಸ್ಯರಾದ ರಾಜಣ್ಣನವರು ಭಾಷಣ ಪ್ರಾರಂಭ ಮಾಡಬೇಕು.

(ಶ್ರೀ ಚಂದ್ರಶೇಖರ ಎಂ. ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು) ಬೇಡಿಕೆ ಸಂಖ್ಯೆ (1,2,3,4,46,8)

+ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಉಪಾಧ್ಯಕ್ಷರೇ, ದಿನಾಂಕ 28.4.98ರ ಸಂಜೆ 6 ಗಂಟೆ 50 ನಿಮಿಷಕ್ಕೆ ನನ್ನ ಭಾಷಣವನ್ನು ಪೂರ್ಣ ಮಾಡದೇ ನಿಲ್ಲಿಸಿದ್ದೆ. ಅಂದು ಸಮಯದ ಅಭಾವದಿಂದ ಸದನ ಮುಂದೂಡಿದ್ದರಿಂದ ನನಗೆ ಮತ್ತೆ ಮಾತನಾಡಲು ಅವಕಾಶ ಕೊಟ್ಟ ನಿಮಗೆ ಕೃತಜ್ಞನಾಗಿದ್ದೇನೆ. ಅಂದು ನಾನು ಬೇಡಿಕೆಗಳಾದ ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮೊದಲು ವ್ಯವಸಾಯದ ಬಗ್ಗೆ ಭಾಷಣವನ್ನು ಮುಕ್ತಾಯ ಮಾಡಿ ಹೈನುಗಾರಿಕೆಯ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿದ್ದೆ. ಈ ನಾಲ್ಕೂ ಬೇಡಿಕೆಗಳು ಮನುಷ್ಯನ ಆರೋಗ್ಯಕ್ಕೆ ಬಹಳ ಮುಖ್ಯವಾದವುಗಳು ಎಂದು ಅವೊತ್ತೇ ಹೇಳಿದ್ದೇನೆ. ಈ ನಾಲ್ಕು ಬೇಡಿಕೆಗಳೂ ಸೇರಿದರೆ ಹತ್ತು ಆಗುತ್ತದೆ. ಈ ಹತ್ತರಲ್ಲಿ ಒಂದನ್ನು ಮೈನಸ್ ಮಾಡಿದರೆ 9 ಆಗುತ್ತದೆ. ಈ 9 ಅನ್ನಾಂಗಗಳು ಮನುಷ್ಯನ ಆರೋಗ್ಯಕ್ಕೆ ಬಹಳ ಮುಖ್ಯವಾದದ್ದೆಂದು ಆವೊತ್ತೇ ಹೇಳಿದ್ದೆ. ಈಗ ನಾನು ಹೈನುಗಾರಿಕೆಯ ಬಗ್ಗೆ ಮಾತನಾಡುತ್ತೇನೆ. ಈ ಹೈನುಗಾರಿಕೆಯಲ್ಲಿ ಕೇವಲ ಹಸುವಿನ ಹಾಲನ್ನು ಕುಡಿದು ಋಷಿಮುನಿಗಳು 200 ರಿಂದ 300 ವರ್ಷಗಳವರೆಗೆ ಬದುಕಿದ್ದಾರೆ.

12.10 ಪಿ.ಎಂ

ಆದರೆ ಇವತ್ತು ನಾವು ಹಾಲು ಕುಡಿಯುವುದನ್ನು ಕಡಿಮೆ ಮಾಡಿ ಬಿಟ್ಟು ಏನೇನೋ ಊಟ ಮಾಡಿ ಇಲ್ಲದಿದ್ದ ಖಾಯಿಲೆಗಳನ್ನು ತರಿಸಿಕೊಂಡಿದ್ದೇವೆ. ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಅದಕ್ಕೋಸ್ಕರ ನಾನು ತಮ್ಮಲ್ಲಿ ಕಳಕಳಿಯ ಮನವಿ ಏನೆಂದರೆ ವ್ಯವಸಾಯ, ಹೈನುಗಾರಿಕೆ ವಿಚಾರ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜಣ್ಣನವರು ಹಾಲು ಕುಡಿಯುವುದನ್ನು ಬಿಟ್ಟು ನಾವು ಏನೇನೋ ಕುಡಿಯುತ್ತೇವೆಂದು ಹೇಳುತ್ತಾರೆ. ಅದೇನೇನು ಎಂದು ಸ್ವಲ್ಪ ದಯವಿಟ್ಟು ಅವರು ಹೇಳಲಿ.

ಶ್ರೀ ಎನ್. ರಾಜಣ್ಣ : ಹಿರಿಯ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತೇನೆ. ಡಿಸ್ಟರ್ಬ್ ಆದರೆ ಬೇರೆ ಕಡೆಗೆ ವಿಚಾರ ಹೋಗುತ್ತದೆ. ಆಮೇಲೆ ಕೇಳಿ ಹೇಳುತ್ತೇನೆ. ವ್ಯವಸಾಯದಲ್ಲಿ ಎಷ್ಟು ಕಷ್ಟ ಇದೆಯೋ, ಅಷ್ಟೇ ಕಷ್ಟ ಹೈನುಗಾರಿಕೆಯಲ್ಲಿಯೂ ಇದೆ. ವ್ಯವಸಾಯದಲ್ಲಿ ಬೆಳೆ ಸಿಲ್ಕ್ ಅಂಡ್ ಮಿಲ್ಕ್ ವಿಚಾರ. ಸಿಲ್ಕನ್ನು 30 ದಿನದಲ್ಲಿ ಬೆಳೆದು ಮಾರುಕಟ್ಟೆಗೆ ತರಬೇಕಾದರೆ ಎಷ್ಟು ಕಷ್ಟ ಇದೆಯೋ ಮಿಲ್ಕ್‌ನಲ್ಲಿ ಅವನು ಇನಿಸಿಮಿನೇಟ್ ಮಾಡಿ ಕರು ಹೊರಗಡೆ ಬಂದು ಅದು ಹಾಲು ಕೊಡಬೇಕಾದರೆ 800 ದಿನಗಳು ಬೇಕು. ನೀವು 30 ದಿನದಲ್ಲಿ ಏನು ಬೆಳೆ ಬೆಳೆಯಬಹುದು, 60 ದಿನದಲ್ಲಿ ತರಕಾರಿ ಬೆಳೆಯಬಹುದು. ನಾಲ್ಕು ತಿಂಗಳಲ್ಲಿ ರಾಗಿ ಬೆಳೆ ಬೆಳೆಯಬಹುದು, ಐದಾರು ತಿಂಗಳಲ್ಲಿ ಭತ್ತ ಬೆಳೆಯಬಹುದು. 13 ತಿಂಗಳಲ್ಲಿ ಕಬ್ಬು ಬೆಳೆಯಬಹುದು. ಆದರೆ ಈ ಬೆಳೆ ಬರಬೇಕಾದರೆ 800

ದಿನಗಳು ಬೇಕು. ಅಷ್ಟು ಸುಲಭವಾದ ಕೆಲಸವಲ್ಲ, ಹೈನುಗಾರಿಕೆ ರೈತನ ಕಷ್ಟ ಬಹಳ ಕಷ್ಟವಾದ ಕೆಲಸ. ಇವನು ಬೆಳಿಗ್ಗೆ ಕಾಗೆ ಕೂಗುವ ಮುಂಚೆ ಎದ್ದರೆ ಸಂಜೆ ಕಾಗೆ ಗೂಡಿಗೆ ಹೋದ ಮೇಲೂ ಸಂಜೆಯೂ ಕೆಲಸದಲ್ಲಿ ಇರಬೇಕು. ಹಸುವಿನ ಪಕ್ಕದಲ್ಲಿ ಇದ್ದರೆ ಮಾತ್ರ ಹಸುವನ್ನು ಸಾಕುವುದಕ್ಕೆ ಆಗುತ್ತದೆ. ಹಸು ಸಾಕುವುದು ಅಷ್ಟು ಸುಲಭವಲ್ಲ. ಹಸುವನ್ನು ಒಂದು ಸ್ಪೆಷಲ್ ವಾರ್ಡಿನಲ್ಲಿಟ್ಟು ನೋಡಿಕೊಂಡರೆ ಮಾತ್ರ ಒಳ್ಳೆಯದಾಗುತ್ತದೆ. ಆಸ್ಪತ್ರೆಯಲ್ಲಿ ನಾವು ಹೇಗೆ ಪೇಷೆಂಟ್‌ಗಳನ್ನು ಇಟ್ಟು ನೋಡಿಕೊಳ್ಳುತ್ತೇವೆ, ಆ ತರಹ ನೋಡಿಕೊಂಡರೆ ಮಾತ್ರ ಹಸುವನ್ನು ಸಾಕುವುದಕ್ಕೆ ಆಗುತ್ತದೆ. ಇಲ್ಲ ಎಂದರೆ ಬಹಳ ಕಷ್ಟವಾದ ಕೆಲಸ ಇದು. ಇವತ್ತು ಉದಾಹರಣೆಗೆ ಹೇಳಬೇಕಾದರೆ ಯಾವುದಾದರೂ ವಿಐಪಿಗಳು ಆಸ್ಪತ್ರೆಗೆ ಹೋದರೆ ಆ ವಿಐಪಿಯನ್ನು ನೋಡಲು ಆಸ್ಪತ್ರೆಗೆ ನೂರಾರು ಜನರು ಹೋಗುತ್ತಾರೆ, ಅದೂ ಬೊಕ್ಕೆ ಎತ್ತಿಕೊಂಡು ಹೋಗುತ್ತಾರೆ, ಪೂಟ್ಸ್ ಎತ್ತಿಕೊಂಡು ಹೋಗುತ್ತಾರೆ, ಸ್ವೀಟ್ಸ್ ಸಹ ತೆಗೆದುಕೊಂಡು ಹೋಗಿ ಕ್ಯೂನಲ್ಲಿ ನಿಂತುಕೊಳ್ಳುತ್ತಾರೆ. ಆದರೆ ಹಸು ಗಾಯ ಆಗಿ ಅದು ಕೊಟ್ಟಿಗೆಯಲ್ಲಿ ಮಲಗಿಕೊಂಡಿದ್ದರೆ, ಹಸು ಸಾಕತಕ್ಕ ಮಾಲೀಕ, ಹೈನುಗಾರಿಕೆ ಮಾಲೀಕ ಯಾರು ಇದ್ದಾರೆ, ಅದನ್ನು ಅರ್ಥ ಮಾಡಿಕೊಂಡು ಆ ಗೋಪಾಲಕ ಅವನೇ ನೋಡಬೇಕು. ಇಲ್ಲ ಎಂದರೆ ನೊಣ ಬರುತ್ತದೆ, ಸೊಳ್ಳೆ ಬರುತ್ತದೆ. 24 ಗಂಟೆಯಲ್ಲಿ ಚಟ್ ಆಗುತ್ತದೆ. ಅದಕ್ಕೋಸ್ಕರ ಹೈನುಗಾರಿಕೆ ಬಹಳ ಮುಖ್ಯವಾದುದು. ಅದಕ್ಕೋಸ್ಕರವಾಗಿ ನಾವೆಲ್ಲಾ ಹೈನುಗಾರಿಕೆಗೆ ಆದಷ್ಟು ಜಾಸ್ತಿ ಹಣ ಕಾದಿರಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ವಾರ್ಷಿಕ ವರದಿಯ ಪ್ರಕಾರ ರಾಜ್ಯದಲ್ಲಿ 2 ಕೋಟಿ 50 ಲಕ್ಷ ಜಾನುವಾರುಗಳ ಸಂಪತ್ತು ಇದೆ. ಸುಮಾರು 14 ಕೋಟಿ ರೂಪಾಯಿಗಳನ್ನು ಇವುಗಳ ಸಂರಕ್ಷಣೆಗಾಗಿ ಇಡಲಾಗಿದೆ. ಯೋಜನೆ ಹಾಗೂ ಯೋಜನೇತರ ಬಾಬುಗಳಿಗೆ. ಇವುಗಳಲ್ಲಿ 2.5 ಕೋಟಿ ಜಾನುವಾರುಗಳ ಔಷಧಿಗಾಗಿ ವೆಚ್ಚ ಮಾಡುವ ವೆಚ್ಚ ಕೇವಲ 4 ಕೋಟಿ 53 ಲಕ್ಷ ರೂಪಾಯಿಗಳು ಎಂದು ಬಜೆಟ್‌ನಲ್ಲಿ ತಿಳಿಸಿದೆ. 4 ಕೋಟಿ 53 ಲಕ್ಷ, 2.5 ಕೋಟಿ ಜಾನುವಾರಗಳ ಔಷಧಿಗೆ ಎಂದರೆ ನಾವು ಯೋಚನೆ ಮಾಡಬೇಕು. ಒಂದು ಪ್ರಾಣಿಗೆ ಒಂದು ವರ್ಷಕ್ಕೆ 1 ರೂ. 30 ಪೈಸೆ. ಆರ್ಡಿನರಿ ಟ್ಯಾಬ್ಲೆಟ್ ಬರುವುದಿಲ್ಲ. For a cow per year you have got only Rs. 1.75 to spend. ಇಲ್ಲಿ ಜಾಸ್ತಿ ಖರ್ಚು ಮಾಡಿ, ಹಸುವಿನ ಆರೋಗ್ಯ ಕಾಪಾಡಿದರೆ ಅದು ನಮ್ಮ ಆರೋಗ್ಯ ಕಾಪಾಡುತ್ತದೆ ಎಂಬ ವಿಚಾರಕ್ಕೆ ಮುಂದೆ ಬರುತ್ತೇನೆ. ಅದಕ್ಕೋಸ್ಕರ ದಯವಿಟ್ಟು ಕನಿಷ್ಟ ಇದಕ್ಕೆ 20 ಕೋಟಿ ರೂಪಾಯಿಗಳ ಹಣವನ್ನು ಕಾದಿರಸಬೇಕೆಂದು ಹೇಳಿ ನಾನು ತಮ್ಮಲ್ಲಿ ಬೇಡಿಕೆ ಮಾಡಿ ಕೊಳ್ಳುತ್ತಿದ್ದೇನೆ. ಆಮೇಲೆ 3954 ಹುದ್ದೆಗಳು ಈ ಇಲಾಖೆಯಲ್ಲಿ ಖಾಲಿ ಇದ್ದು ಆದಷ್ಟು ಬೇಗನೇ ಇದನ್ನು ತುಂಬ ಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. 2500 ಕೋಟಿ ಪ್ರಾಣಿಗಳು ಇರುವ ನಮ್ಮ ಕರ್ನಾಟಕ ಪ್ರದೇಶದಲ್ಲಿ ಜಾನುವಾರು ಅಭಿವೃದ್ಧಿ ಮಂಡಲಿ ಇಲ್ಲ. ಕೇರಳದಲ್ಲಿ ಜಾನುವಾರು ಅಭಿವೃದ್ಧಿ ಮಂಡಲಿ ಇದೆ. ನಮ್ಮ ಕರ್ನಾಟಕ ಪ್ರದೇಶದಲ್ಲಿ ಏತಕ್ಕೋಸ್ಕರ ಜಾನುವಾರು ಅಭಿವೃದ್ಧಿ ಮಂಡಲಿ ಮಾಡಬಾರದು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದು ಇನ್‌ಸ್ಟಿಟ್ಯೂಟ್ ಆಫ್ ವ್ಯಾಕ್ಸಿನೇಷನ್ ಹೆಬ್ಬಾಳದಲ್ಲಿದೆ. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಇದು ಬಹಳ ಮುಖ್ಯವಾದ ಸಂಸ್ಥೆ ಆದುದರಿಂದ ದನಗಳಿಗೆ ಸಾಂಕ್ರಾಮಿಕ ಮತ್ತು ಸೋಂಕು ರೋಗಗಳ ದೊಡ್ಡ

ರೋಗ, ಕಾಲು, ಬಾಯಿ, ಜ್ವರ ಹಾಗೂ ಇನ್ನಿತರ ಕೆಲವಾರು ಖಾಯಿಲೆಗಳು ಜಾಸ್ತಿ ಆಗಿ ಪ್ರಾಣಿಗಳು ನರಳುತ್ತಿವೆ. ಈ ಸಂಸ್ಥೆ ಒಳ್ಳೆಯ ಕೆಲಸ ಮಾಡುತ್ತಿದೆ. ಆದ್ದರಿಂದ ಈ ಸಂಸ್ಥೆಗೆ ಕಾದಿರಿಸತಕ್ಕ ಹಣ 149 ಲಕ್ಷ, ಇದು ಜಾಸ್ತಿ ಆಗುವುದಿಲ್ಲ, ಕೊನೆಯ ಪಕ್ಷ 200 ಲಕ್ಷ ರೂಪಾಯಿಗಳನ್ನು ಈ ಸಂಸ್ಥೆಗೆ ಕಾದಿರಿಸಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕಾಲು ಬಾಯಿ ರೋಗ ಬಹಳ ಡೇಂಜರಸ್ ರೋಗ. ರಿಂಡರ್ ಫ್ಲಾಸ್ಟರ್ ಬಂದರೆ ಅದೇನೋ ಆಗಿ ಎರಡು ದಿನ ಇಲ್ಲ ಮೂರು ದಿನದಲ್ಲಿ ಚಟ್ ಆಗಿ ಸತ್ತು ಹೋಗಿ ಬಿಡುತ್ತದೆ, ತೊಂದರೆ ಇಲ್ಲ. ಆದರೆ ಈ ಫುಡ್ ಅಂಡ್ ಮೌತ್ ಡಿಸೀಸ್ ಇದೆಯಲ್ಲಾ, ಇದು ನಾನಾ ಕಾರಣದಿಂದ ಆಗಾಗ್ಗೆ ರಿಪೀಟ್ ಆಗುತ್ತಿರುತ್ತದೆ. ಇದಕ್ಕೆ ಜಾಸ್ತಿ ಪ್ರೋತ್ಸಾಹ ಕೊಟ್ಟು ಈ ಫುಡ್ ಅಂಡ್ ಮೌತ್ ಡಿಸೀಸ್ ಬರುವುದನ್ನು ಏನಾದರೂ ಮಾಡಿ ನಿಲ್ಲಿಸಬೇಕು. ಅದು ಯಾವ ವ್ಯಾಕ್ಸಿನ್ ಆದರೂ ಸರಿ, ತೆಗೆದುಕೊಂಡು ಬನ್ನಿ. ಫುಡ್ ಅಂಡ್ ಮೌತ್ ಡಿಸೀಸ್ ಅನ್ನು ನಿಲ್ಲಿಸಬೇಕು ಮತ್ತು ವ್ಯಾಕ್ಸಿನ್ ಮಾಡತಕ್ಕಂಥ ವೆಟರಿನರಿ ಇನ್ಸ್‌ಪೆಕ್ಟರ್ ಆಗಲಿ ಡಾಕ್ಟರ್ ಆಗಲಿ they have to take special care. They have to produce and till it reaches the body of the cow or buffalo or any animal, the chain link method of maintaining the cold and temperature should be followed. ಇಲ್ಲ ಎಂದರೆ ಅವರು ವ್ಯಾಕ್ಸಿನ್ ಮಾಡಿಯೂ ಪ್ರಯೋಜನ ಆಗುವುದಿಲ್ಲ ಎಂದು ನಾನು ತಿಳಿಸುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಪಶು ವೈದ್ಯಕೀಯ ಹಾಗೂ ಪ್ರಾಣಿಗಳ ಹೊಸ ವಿಶ್ವವಿದ್ಯಾನಿಲಯವನ್ನು ತೆಗೆಯಬೇಕೆಂದು ನಾನು ಮಾನ್ಯ ವ್ಯವಸಾಯ ಮಂತ್ರಿಗಳಾದಂತಹ ಶ್ರೀ ಬೈರೇಗೌಡರನ್ನು ಕೇಳಿಕೊಳ್ಳುತ್ತಿದ್ದೇನೆ. ವೆಟರಿನರಿ ಯೂನಿವರ್ಸಿಟಿ ಹೆಬ್ಬಾಳದಲ್ಲಿ ಸ್ಥಳಾವಕಾಶ ಇರುವುದರಿಂದ ಅಗತ್ಯವಾದ ಕಟ್ಟಡಗಳೂ ಅಲ್ಲಿವೆ. ಹಾಗೂ 100 ಎಕರೆ ಹೆಸರಘಟ್ಟ ಡೈರಿ ಫಾರ್ಮ್‌ನಲ್ಲಿ ಜಾಗ ಇರುವುದರಿಂದ ಇಲ್ಲಿ ವೆಟರಿನರಿ ಯೂನಿವರ್ಸಿಟಿಯನ್ನು ತೆಗೆಯಬೇಕೆಂದು ನಾನು ನಮ್ಮ ಸರ್ಕಾರಕ್ಕೆ ಕೋರಿಕೊಳ್ಳುತ್ತಿದ್ದೇನೆ. ಈ ವೆಟರಿನರಿ ಯೂನಿವರ್ಸಿಟಿಯನ್ನು ದೇಶದ ಕೆಲವು ಕಡೆ ಈಗಾಗಲೇ ತೆರೆದಿದ್ದಾರೆ. ಒಂದು ತಮಿಳುನಾಡಿನಲ್ಲಿ ಕಾರ್ಯರೂಪಕ್ಕೆ ಬಂದು ಕಾರ್ಯ ನಡೆಸುತ್ತಿದೆ. ಎರಡನೆಯದು ವೆಸ್ಟ್ ಬೆಂಗಾಲ್‌ನಲ್ಲಿ ಈಗಾಗಲೇ ಅವರೂ ಈ ಒಂದು ವೆಟರಿನರಿ ಯೂನಿವರ್ಸಿಟಿಯನ್ನು ತೆಗೆದಿರುವುದರಿಂದ ಅಲ್ಲಿನ ಪ್ರಾಣಿಗಳಿಗೆ ಸಹಾಯ ಆಗುತ್ತಿದೆ. ಆಮೇಲೆ ಪಂಜಾಬಿನಲ್ಲಿ ರೀಸೆಂಟಾಗಿ ಅವರೂ ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಇದಕ್ಕೇನೂ ಜಾಸ್ತಿ ಹಣ ಬೇಕಾಗಿಲ್ಲ, ಜಾಗ ಇದೆ, ಕಟ್ಟಡ ಇದೆ. ಹೆಸರುಘಟ್ಟದಲ್ಲಿ ಸಾವಿರ ಎಕರೆ ಜಾಗ ಇದೆ. ಇದಕ್ಕೆ ತಾವು ವೆಟರಿನರಿ ಯೂನಿವರ್ಸಿಟಿ ತೆಗೆದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ನಾನು ಸನ್ಮಾನ್ಯ ಬೈರೇಗೌಡರು ಹೇಳಿದಂತಹ ಉತ್ತರವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಎಫಿಷಿಯೆನ್ಸಿ ಇಲ್ಲ ಎಂದು ಹೇಳಿದ್ದಾರೆ. I appreciate the way he expressed on that day. ಎಫಿಷಿಯೆನ್ಸಿ ಇಲ್ಲ, ನಮ್ಮ ದೇಶದಲ್ಲಿ ಕ್ವಾಂಟಿಟಿ ಇದೆ, ಕ್ವಾಲಿಟಿ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಮುಂದೆ ಬೇಡಿಕೆ ಇರತಕ್ಕದ್ದು ಮೀನುಗಾರಿಕೆ ವ್ಯವಸಾಯ, ರೇಷ್ಮೆ ಇಲ್ಲಿ ತ್ರಿಮೂರ್ತಿಗಳು ಕಾಣುತ್ತಿದ್ದಾರೆ. ರೇಷ್ಮೆ, ಕೃಷಿ ಮತ್ತು ಪಶು ಸಂಗೋಪನೆ. ಇನ್ನು ಎರಡು ಮಂತ್ರಿಗಳು ಇಲ್ಲಿಲ್ಲ. ಅವರಿಗೆ ಸಂಬಂಧಪಟ್ಟಂತೆ ವಿಚಾರಗಳನ್ನು ಯಾರಿಗೆ ಹೇಳಬೇಕು?

ಉಪಾಧ್ಯಕ್ಷರು : ಚುನಾವಣೆಯಲ್ಲಿ ಮತ ಹಾಕಲು ಹೋಗಿದ್ದಾರೆ, ಬರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನಾವೆಲ್ಲ ಇಲ್ಲಿ ಮತ ಹಾಕಿ ಬಂದಿದ್ದೇವೆ. ಬೇಡಿಕೆ ಚರ್ಚೆ ಆಗತಕ್ಕ ಸಂದರ್ಭದಲ್ಲಾದರೂ ಅವರುಗಳು ಇರಬೇಕಲ್ಲಾ. ಕೌಂಟಿಂಗ್ ಸಹ ಶುರುವಾಗಿದೆ.

ಉಪಾಧ್ಯಕ್ಷರು : ಅವರುಗಳು ಮತ ಹಾಕಿದ್ದರೆ ಬನ್ನಿ ಎಂದು ತಿಳಿಸಿ, ರಾಜಣ್ಣನವರೇ, ಬೇಗ ಮುಗಿಸಿ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ಬಹಳ ಕಷ್ಟಪಟ್ಟು ಆ ಒಂದು ವ್ಯವಸಾಯ ಇಲಾಖೆಯನ್ನು ಶುದ್ಧ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ನಾವು ಒಪ್ಪಬೇಕು. ನಾನು ಅದರ ಮುಂದೆನೇ ಅಪ್ರೀಷಿಯೇಟ್ ಮಾಡಬೇಕು ಎಂದು ಹೇಳುವುದಿಲ್ಲ. We want a person like Shri. Byre Gowda to tone up the administration. I appreciate. I hope you can also appreciate. You can also open this University. I expect good work from the employees and the officers of the State Government. We do not want quantity of men, we want quality of men to do good service to the citizens of Karnataka, especially in this field. ಏಕೆಂದರೆ ಪ್ರಾಣಿಗೆ ಬಾಯಿ ಇರುವುದಿಲ್ಲ. ಅದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡುವಂತಹ ಬಹಳ ಅಧಿಕಾರಿಗಳು ಇದ್ದಾರೆ. ಅವರು ಸ್ವಲ್ಪ ಎಫಿಷಿಯೆಂಟ್ ಆಗಿ ಎಫರ್ಟ್ ಹಾಕಿದರೆ they can do better thing and get a good result.

ಶ್ರೀ ಎಸ್. ರಾಜೇಂದ್ರನ್ : ಕ್ವಾಂಟಿಟಿ ಇದೆ, ಕ್ವಾಲಿಟಿ ಇಲ್ಲ ಎಂದು ಹೇಳುತ್ತಿದ್ದಾರೆ, ಅದನ್ನು ಸ್ವಲ್ಪ ಎಕ್ಸ್‌ಪ್ಲೈನ್ ಮಾಡಿದರೆ ಒಳ್ಳೆಯದು.

ಶ್ರೀ ಎನ್. ರಾಜಣ್ಣ : ದಿನಾಂಕ 21.04.98ರಂದು ಸಂಜೆ 4.30 ಗಂಟೆಗೆ ಸನ್ಮಾನ್ಯ ಶಾಸಕರಾದಂತಹ ಪುಟ್ಟಣ್ಣಯ್ಯನವರು ಸನ್ಮಾನ್ಯ ಶಾಸಕರಾದ ಶ್ರೀಮಾನ್ ಶ್ರೀರಾಮರೆಡ್ಡಿಯವರು ಮತ್ತು ಶಾಸಕರಾದಂತಹ ಹಿರಿಯರಾದಂತಹ ವಾಟಾಳ್ ನಾಗರಾಜ ಅವರು ಕೆಲವು ಆರೋಗ್ಯ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ, ಇದು ನಿಜವಾದ ಅಂಶ. ಒಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದೇನೆಂದರೆ ಅಂಗವಿಕಲತೆ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿದೆ. ಇದು ನೂರಕ್ಕೆ ನೂರು ಸತ್ಯಾಂಶ ಇದೆ. ಪ್ರಾಣಿಗಳಲ್ಲಿ ಅಂಗವಿಕಲತೆ ಈಗ ಆಗುತ್ತಿಲ್ಲ. ಕಡಿಮೆಯಾಗಿದೆ. ಆದರೆ ಮನುಷ್ಯರಲ್ಲಿ 5-6 ಪರ್ಸೆಂಟ್‌ವರೆಗೂ ಹೋಗಿದೆ. ಏನಾಗಿದೆ ಎಂದರೆ ಇವತ್ತು ವ್ಯಾಪಾರಸ್ಥರು, ಕೆಲವು ರಾಜಕಾರಣಿಗಳು, ಕೆಲವರು ಅಧಿಕಾರಿಗಳು ಸೇರಿಕೊಂಡು they are creating and extracting. ಒಂದು ಪರ್ಸೆಂಟ್ ಇದ್ದಿದ್ದು 5-6 ಪರ್ಸೆಂಟ್‌ಗೆ ಹೋಗಿದೆ. ಇವರು ಕ್ರಿಯೇಟ್ ಮಾಡುತ್ತಾರೆ. ಒಂದು ಕಾಲ ಬರುತ್ತದೆ. ಇದು ಇನ್ನೂ ಜಾಸ್ತಿಯಾಗುತ್ತದೆ. ಅಂಗವಿಕಲರು ಇನ್ನು ಜಾಸ್ತಿಯಾಗುತ್ತಾರೆ. I appreciate the senior Members. ಮಾನ್ಯ ಪುಟ್ಟಣ್ಣಯ್ಯನವರು, ಶ್ರೀ ರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು ಹೇಳಿದ್ದರು. ಶ್ರೀರಾಮರೆಡ್ಡಿಯವರು ಪೌಷ್ಟಿಕ ಆಹಾರದ ಬಗ್ಗೆ ಏನು ವ್ಯತ್ಯಾಸ ಇದೆ ಎಂದು ಹೇಳಿದ್ದರು.

Malnutrition produces weaker body and mind. We are spending crores of rupees for the body and the mind. I appreciate. We are spending for child and mother care. ಚೈಲ್ಡ್ ಅಂಡ್ ಮದರ್ ಕೇರ್‌ಗೆ 263 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. I request all the Hon'ble Members to transfer at least 20% of this amount to look after the health and wealth of the animals. ಇದರಲ್ಲಿ 20 ಪರ್ಸೆಂಟ್ ಹಣವನ್ನು ಪ್ರಾಣಿಗಳ ಆರೋಗ್ಯವನ್ನು ಕಾಪಾಡುವುದಕ್ಕೋಸ್ಕರ ಟ್ರಾನ್ಸ್‌ಫರ್ ಮಾಡಿ, ಅವುಗಳು ಆರೋಗ್ಯವಾಗಿ ಇದ್ದರೆ, ಅವುಗಳು ನಮ್ಮನ್ನು ಆರೋಗ್ಯವಾಗಿ ಕಾಪಾಡುತ್ತವೆ ಎಂದು ಹೇಳುತ್ತೇನೆ. ಇಲ್ಲಿ ಹಣಕಾಸಿನ ಮಂತ್ರಿಗಳು ಇಲ್ಲ, ಅವರಿಗೆ ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. I request Shri. Byre Gowda to inform the Finance Minister, what you are spending on women and child development, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ 263 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ ಇದೇ ಸದನದಲ್ಲಿ ಪೌಷ್ಟಿಕ ಆಹಾರದ ಬಗ್ಗೆ ಚರ್ಚೆಯಾಗುತ್ತಿದೆ. ಪೌಷ್ಟಿಕ ಆಹಾರ ಸಿಗುತ್ತಿಲ್ಲ. ಮಕ್ಕಳಿಗೂ ಇಲ್ಲ, ತಾಯಿಗೂ ಇಲ್ಲ. ಅದಕ್ಕೋಸ್ಕರ 20 ಪರ್ಸೆಂಟ್ ಹಣವನ್ನು ಹೈನುಗಾರಿಕೆಗೆ ಟ್ರಾನ್ಸ್‌ಫರ್ ಮಾಡಿ. ಆ ಪ್ರಾಣಿಗಳು ನಮ್ಮ ಆರೋಗ್ಯವನ್ನು ಕಾಪಾಡುತ್ತವೆ. ಅರಣ್ಯ ಸಂಪತ್ತು, ಪ್ರಾಣಿಗಳ ಸಂಪತ್ತು, ಪಕ್ಷಿಗಳ ಸಂಪತ್ತಿನಲ್ಲಿ ನಾವು ಬದುಕಬೇಕು. ನಾವು ಪಾಷಾಣ ಲೋಕದಲ್ಲಿ ಬದುಕುತ್ತಿದ್ದೇವೆ. ಕ್ರಿಯೇಟ್ ಮತ್ತು ಎಕ್ಸ್‌ಟ್ರಾಕ್ಟ್ ಮಾಡುವಂಥಾದ್ದು. ಆದುದರಿಂದ ನಾವು ಕೆಲವನ್ನು ಇಟ್ಟುಕೊಂಡು ಯುವ ಜನಾಂಗ ಹಾಳಾಗುತ್ತಿದೆ. ಇವತ್ತು ಬೆಳಿಗ್ಗೆ ಚರ್ಚೆ ಆಗುತ್ತಿರುವುದು ನೀವೇ ನೋಡುತ್ತಿದ್ದೀರಿ. ಏಕೆಂದರೆ ಮೆಂಟಲಿ, ಬಾಡಿಲಿ ಸ್ಪೆಬಿಲಿಟಿ ಹೋಗುತ್ತಿದ್ದೆ. ಆದಕಾರಣ ಪಶುಗಳ ಆರೋಗ್ಯವನ್ನು ಚೆನ್ನಾಗಿ ಕಾಪಾಡಿದರೆ ಆರೋಗ್ಯವು ತಾನಾಗಿ ಹೆಚ್ಚಿ ಹಾಲಿನ ಪ್ರಮಾಣದಿಂದ ತಾಯಿಗೂ ಮಗುವಿಗೂ ಆರೋಗ್ಯ ಚೆನ್ನಾಗಿ ಇರಲು ಸಾಧ್ಯವಾಗುತ್ತದೆಂದು ಹೇಳಿ ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಇನ್ನೊಂದು ಮಾತು ಹೇಳುವುದೇನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಇದನ್ನು ಮೊದಲು ಪ್ರಾರಂಭ ಮಾಡಬೇಕು. ಎಲ್ಲಾ ತಾಲ್ಲೂಕುಗಳಲ್ಲಿ ಇವತ್ತು ಸೊಸೈಟಿಗಳು ಇವೆ. ನೀವು ಪೌಷ್ಟಿಕ ಆಹಾರಕ್ಕೆ ಏನು ಖರ್ಚು ಮಾಡುತ್ತೀರಿ, ಅದು ಗರ್ಭಣಿ ಸ್ತ್ರೀಗೆ ಅರ್ಧ ಲೀಟರ್ ಹಾಲು 10 ಎಂ.ಎಲ್. ಜೀನುತುಪ್ಪ ದಿನಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡಿ. ಜೀನುತುಪ್ಪ ಕಷ್ಟ ಇರಬಹುದು. ಎಲ್ಲಾ ಹಳ್ಳಿಗಳಲ್ಲೂ ಅನ್‌ಎಂಪ್ಲಾಯ್‌ಮೆಂಟ್ ಜಾಸ್ತಿ ಇದೆ. ಇಬ್ಬಿಬ್ಬರು ಯುವಕರಿಗೆ ಎನ್‌ಕರೇಜ್ ಮಾಡಿ ಜೀನುಗೂಡು ಬೆಳೆಸಿ ಹನಿ ಕೊಡಲು ಪ್ರಯತ್ನ ಮಾಡಿದರೆ. You can have a real health of the baby and the mother.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಮಾನ್ಯ ಉಪಾಧ್ಯಕ್ಷರೇ,.....

ಮಾನ್ಯ ಉಪಾಧ್ಯಕ್ಷರು : ನೀವು ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲೆಲ್ಲೋ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ತಾವು ಜವಾಬ್ದಾರಿ ಸದಸ್ಯರು. ಎಲ್ಲಿ ಎಂದರೆ ಅಲ್ಲಿ ನಿಂತುಕೊಂಡು ಮಾತನಾಡಬಹುದೇ? ಎದ್ದು ನಿಮ್ಮ ಸ್ಥಾನದ ಕಡೆಗೆ ಹೋಗಿ.

ಶ್ರೀ ಎನ್. ರಾಜಣ್ಣ : ಅವರು ಮಲೆನಾಡಿನಲ್ಲಿ ಹುಟ್ಟಿರುವುದು. ಅವರಿಗೆ ಜೇನುಗಳ ಬಗ್ಗೆ ಜಾಸ್ತಿ ಗೊತ್ತಿದೆ. ಅದಕ್ಕೆ ಮಾತನಾಡಿದ್ದಾರೆ.

ಉಪಾಧ್ಯಕ್ಷರು : ರಾಜಣ್ಣನವರೇ, ನಿನ್ನೆ ಇವತ್ತು ಸೇರಿ ಒಂದು ಗಂಟೆಯಾಯಿತು. ಬೇಗ ಮುಗಿಸಿ.

ಶ್ರೀ ಎನ್. ರಾಜಣ್ಣ : ತಾಯಿಗೂ ಮಗುವಿಗೂ ಮುಖ್ಯವಾಗಿ ಅರ್ಧ ಲೀಟರ್ ಹಾಲು 10 ಎಂ.ಎಲ್. ಜೇನುತುಪ್ಪ ಕೊಡುವುದಕ್ಕೆ ಪ್ರಯತ್ನ ಮಾಡಿ. ಇನ್ನೇನೂ ಬೇಡ. ಹಳ್ಳಿಗಳಲ್ಲಿ ಸಿಗುವುದಿಲ್ಲ. ಬ್ರಿಟೀಷ್ ನವರು ಟಾನಿಕ್ ಮಾಡುತ್ತಿದ್ದ. ಅವನು ಬೆಳಿಗ್ಗೆ Indian tonic prepared by the Britishers, ಏನೂ ಇಲ್ಲ, ಸಿಂಪಲ್, ಏನೆಂದರೆ ರಾಗಿಯನ್ನು ಮಾಲ್ಟ್ ಮಾಡಿಕೊಂಡು ಬೆಳ್ಳಿಗ್ಗೆ ಬೆಲ್ಲ ಹಾಕಿಕೊಂಡು ಕುಡಿಯುತ್ತಿದ್ದ. ಅದನ್ನು ಕೊಟ್ಟು ನೋಡಿ. Your vitamin `B` will be increased and the health will be perfect with this tonic made in india by the Britishers. ಇದನ್ನು ಮಾಡಿ ನೀವು ಪೌಷ್ಟಿಕಾಂಶಕ್ಕೆ 263 ಕೋಟಿ ರೂಪಾಯಿ ಖರ್ಚು ಮಾಡಿದರೂ ಪ್ರಯೋಜನ -ವಾಗುವುದಿಲ್ಲ. ಎರಡನೆಯದಾಗಿ ಮೊಳಕೆ ಹುರುಳಿ ಕಾಳು ಕೊಡಿ. ನೀವು ಇಷ್ಟು ಮಾಡಿ ಸರ್. You can see the health of the mother and the child and the strong state of this Country. ಇದನ್ನು ಖರ್ಚು ಮಾಡುವುದನ್ನು ಅರ್ಧಕ್ಕೆ ಟ್ರಾನ್ಸಫರ್ ಮಾಡಿ. ಇನ್ನು ಪಶುಸಂಗೋಪನೆಯಲ್ಲಿ ತೆಗೆದುಕೊಳ್ಳಬೇಕಾದಂತಹ ಮುನ್ನೆಚರಿಕೆ. ಇನ್ನೊಂದು ಸಮಸ್ಯೆ, ಅದು ಏನೆಂದರೆ ಕೃತಕ ಗರ್ಭಧಾರಣೆ , 8,66,00 ಇನ್‌ಸಿಮಿನೇಷನ್ ಮಾಡಿದ್ದಾರೆ. ಆದರೆ ಕರುಗಳು ಜನನ ಆಗಿರುವುದು , 2,14,000 ಮಾತ್ರ. I want to ask these officers what happened to another 6 lakh calves? That shows, your, men are not perfect in their job. ಎಂದರೆ ಒಂದು ಬಾರಿ ಇನ್‌ಸಿಮಿನೇಷನ್ ಹೋಗುವ ಬದಲು ಆರು ಬಾರಿ ಹೋಗಬೇಕು. A hope you will take care and see that ಒಂದನೇ ಬಾರಿಗೆ ಹಸು ಗರ್ಭ ನಿಲ್ಲಬೇಕು. ಇಲ್ಲದಿದ್ದರೆ ಎರಡು ಬಾರಿಗೆ ನಿಲ್ಲಬೇಕು. ಅದಕ್ಕೆ ಐದೈದು ರೂಪಾಯಿ ಮಾಡಿದ್ದಾರೆ. ಮಾಡಿದ್ದು ಒಳ್ಳೆಯದು. ಏಕೆಂದರೆ ರೈತನಿಗೆ ರೆಸ್ಪಾನ್ಸಿಬಿಲಿಟಿ ಇರುತ್ತದೆ. ಆರು ಬಾರಿ ಇನ್‌ಸಿಮಿನೇಷನ್ ಮಾಡಿ ಕೊನೆಯಲ್ಲಿ 6 ರಿಂದ 8 ಬಾರಿ ಆಗಿ ಕೊನೆಗೆ ಕಸಾಯಿ ಖಾನೆಗೆ ಹೋಗುತ್ತದೆ. ಕೆಲವರು ಒಳ್ಳೆಯವರು ಇದ್ದೀರಿ.

ಉಪಾಧ್ಯಕ್ಷರು : ರಾಜಣ್ಣನವರೇ, ನಿಂಗಯ್ಯನವರು ಏನೋ ಹೇಳುತ್ತಾರೆ.

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಅವರಿಗೆ ಸ್ವತಃ ಡೈರಿ ಇಟ್ಟುಕೊಂಡು ಹೆಚ್ಚಿನ ಅನುಭವ ಇದೆ. ನಾನು ಒಪ್ಪುತ್ತೇನೆ. ಯಾವಾಗ ಅದು ಕೆನೆಯುತ್ತದೆ ಎನ್ನುವ ಸಂದರ್ಭ ನೋಡಿ ರೈತರು ಅಲ್ಲಿರತಕ್ಕಂಥ ವೈದ್ಯರುಗಳನ್ನು ಕಂಡು ಸರಿಯಾಗಿ ಕೃತಕ ಗರ್ಭಧಾರಣೆ

ಮಾಡಿಸಿದರೆ ಹಾಗೆ ಆಗುವುದಿಲ್ಲ. ಬಹಳ ರೈತರಿಗೆ ನಿಮ್ಮಷ್ಟು ಅನುಭವ ಮಾಹಿತಿ ಇರುವುದಿಲ್ಲ. ಎಲ್ಲಾ ಕಡೆ ಸಾರಾಸಗಟಾಗಿ ಈ ರೀತಿಯಾಗುತ್ತದೆ. ಎನ್ನುವುದಲ್ಲ.

ಶ್ರೀ ಎನ್.ರಾಜಣ್ಣ : ಒಂದು ಎರಡು ಬಾರಿ ವ್ಯಾಕ್ಸೀನ್‌ನಲ್ಲಿ ಹಸು ಇನ್‌ಸಿಮಿನೇಟ್ ಮಾಡಿ ಅದು ಗರ್ಭಕಟ್ಟಬೇಕು. ಇದು ಒಂದು. ಎರಡನೆಯದಾಗಿ ಕೆಲವು ಡಾಕ್ಟರುಗಳು ಇನ್‌ಸಿಮಿನೇಷನ್‌ಮಾಡುವಾಗ ಗರ್ಭ ಹೋಗಿ ಅಬಾಷನ್ ಆಗುತ್ತದೆ. ಅಂತಹ ಕೆಲವು ಡಾಕ್ಟರ್‌ಗಳೂ ಇದ್ದಾರೆ. ಅಂತಹವರಿಗೆ ಶೋಕಾಸ್ ನೋಟೀಸ್ ಕೊಡಬೇಕು. He must be perfect in his job. Otherwise,throw him out. ಇಲ್ಲದಿದ್ದರೆ ರೈತ ಸಫರ್ ಆಗುತ್ತಾನೆ, ಅವನ ಹಸು ಕಸಾಯಿ ಖಾನೆಗೆ ಹೋಗುತ್ತದೆ. ಆದುದರಿಂದ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಅದಕ್ಕೆ ಬೇಜಾರು ಮಾಡಿಕೊಳ್ಳಬೇಡಿ. ನಾವು ಕಂಡು ರೈತರು ಬಂದು ಹೇಳುತ್ತಿರುವುದಕ್ಕೆ ಹೇಳುತ್ತಿದ್ದೇನೆ. ವಿಎಲ್‌ಎಗೆ ನೀವು ಟ್ರೇನಿಂಗ್ ತೆಗೆದುಕೊಳ್ಳಬೇಕಾದರೆ. ಅವರಿಗೆ ಎರಡು ವರ್ಷ ಟ್ರೇನಿಂಗ್ ಕೊಡಬೇಕು. ಅವರಿಗೆ 500 ರೂಪಾಯಿ ಸ್ಟೈಫೆಂಡ್ ಕೊಡಿ. ಊಟ ಕೊಡಿ. ಆಮೇಲೆ ಒಂದು ವರ್ಷ rigorous traninig should be given with milltary discipline. ನಂತರ ದನದ ಕೊಟ್ಟಿಗೆಯಲ್ಲಿ 4 ಗಂಟೆಗೆ ಕೆಲಸ ಮಾಡುವ ಟ್ರೇನಿಂಗ್ ಕೊಡಬೇಕು. Then he must be used for th epropr Job in proper places. ಉದಾಹರಣೆಗೆ ಕೃತಕ ಗರ್ಭಧಾರಣೆ ಸಮಯದಲ್ಲಿ ನಾವು ಎಚ್ಚರಿಕೆ ವಹಿಸಬೇಕಾದ್ದು, ಸಿಮೆನ್ ಬ್ಯಾಂಕ್‌ನಿಂದ ಏನು ಬರುತ್ತದೆ ಅದನ್ನು ಕಲೆಕ್ಟ್ ಮಾಡಿ, ಅದು 38 ಡಿಗ್ರಿಗೆ ಬಂದಿದೆಯಾ ಎಂಬುದನ್ನು ಚೆಕ್ ಮಾಡಬೇಕು. ಅದನ್ನು ಜೀರೋ ಡಿಗ್ರಿಯಲ್ಲಿ ಮಾಡಿದರೆ ಅದು ಕನ್ಸೀವ್ ಆಗುವುದಿಲ್ಲ. ಆ ಬಿಸಿಲು ತಾಗಿದರೆ ಕನ್ಸೀವ್ ಆಗುವುದಿಲ್ಲ. ಇದೆಲ್ಲಾ ಎಚ್ಚರಿಕೆ ವಹಿಸಬೇಕು. ಅವನು 10 ಬಾರಿ ಐದೈದು ರೂಪಾಯಿ ಕೊಟ್ಟು ಊರಿನಿಂದ ಬಂದು ಹಾಕಿಸಿಕೊಂಡು ಹೋದರೆ ಪೆಡಫ್ ಆಗಿ ಹಸು ಫಲಕ್ಕೆ ನಿಲ್ಲಲಿಲ್ಲ ಎಂದು ಅದನ್ನು ಕಸಾಯಿ ಖಾನೆಗೆ ಓಡಿಸಿಬಿಡುತ್ತಾನೆ. ಅದಕ್ಕೊಸ್ಕರ ಇದಕ್ಕೆ ಮುನ್ನೆಚ್ಚರಿಕೆ ಕೊಡಬೇಕೆಂದು ಹೇಳುತ್ತಿದ್ದೇನೆ. ಪಶುಸಂಗೋಪನಾ ಇಲಾಖೆಯವರು ಇನ್ನೊಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. 1995ರಲ್ಲಿ ಮಾನ್ಯ ಬಚ್ಚೆಗೌಡರು ಮತ್ತು ಕೆಲವು ಆಫೀಸರ್ಸ್‌ಗಳು ಆಸ್ಟ್ರೇಲಿಯಾಕ್ಕೆ ಹೋಗಿದ್ದರು. ಅವರು ಮಾಡಿದ ಒಳ್ಳೆಯ ಕೆಲಸವೆಂದರೆ - They have visited eastern part of Australia where you can seen only Greenland. Eastern part of Australia where the capital City Canberra is. There, the Jersy Bulls are very familiar and they are all fat-rich. Whether it is for Indian cows or others, if they are inseminated, the milk will contain more fat and more profit to the farmers and also the K.M.F. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾನು ಇದನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಅದೇ ರೀತಿ ಇನ್‌ಸಿಮಿನೇಟ್ ಮಾಡುವಾಗ ವ್ಯತ್ಯಾಸವಾಗುವುದರಿಂದ 4-5 ಹಳ್ಳಿಗಳಿಗೆ ಒಂದೊಂದು ಬುಲ್ ಅನ್ನು ಮೆಂಟೇನ್ ಮಾಡಿ ಅದರಿಂದ ಬ್ರೀಡ್ ತೆಗೆದುಕೊಂಡು ರಿಪೀಟ್ ಮಾಡುವುದಕ್ಕೆ ಸರಿಯಾಗುತ್ತದೆಂಬುದು ನನ್ನ ಸಲಹೆಯಾಗಿದೆ. ಇದಕ್ಕೆ ಡಾಕ್ಟರುಗಳು ಏನು ಹೇಳುತ್ತಾರೆಂದರೆ ಬುಲ್‌ಗಳಿಗೆ ಖಾಯಿಲೆ ಬರುತ್ತದೆ ಆದು ಆಗುವುದಿಲ್ಲವೆಂದು ಹೇಳುತ್ತಾರೆ. ಆ ರೀತಿಯಾಗಿ ಏನೂ ಆಗುವುದಿಲ್ಲ ಡಾಕ್ಟರುಗಳು ಸರಿಯಾಗಿದ್ದರೆ ಈ ಬುಲ್‌ಗಳಿಗೂ

ಹಸುಗಳಿಗೂ ಖಾಯಿಲೆ ಬರುವುದಿಲ್ಲ. ಸರಿಯಾದ ರೀತಿಯಲ್ಲಿ ಗೈಡ್ ಮಾಡಿದರೆ ಶೇ. 99ರಷ್ಟು ಖಾಯಿಲೆ ಬರುವುದಿಲ್ಲ. ಇದಕ್ಕೆ ಸರಿಯಾಗಿ ಚುಚ್ಚುಮದ್ದು ಕೊಡುತ್ತಾ ಬಂದರೆ ಖಾಯಿಲೆ ಬರುವುದಿಲ್ಲವೆಂದು ಹೇಳಲಿಚ್ಚಿಸುತ್ತೇನೆ. ಮಾನ್ಯ ಪಶುಸಂಗೋಪನಾ ಮಂತ್ರಿಗಳಲ್ಲಿ ಹಾಗೂ ಡಾಕ್ಟರ್‌ಗಳಲ್ಲಿ ನನ್ನ ಮನವಿ ಏನೆಂದರೆ ಹಸುವಿನ ಹಿಂದೆ ವಿ ಎಲ್ ಎ ಡಾಕ್ಟರ್ಸ್ ಹೋಗಬೇಕು. ಡಾಕ್ಟರ್ಸ್ ಅನ್ನು ವಿ.ಎಲ್.ಎ ಹುಡುಕಿಕೊಂಡು ರೈತರು, ಹಸುಗಳು ಬರಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಡಾಕ್ಟರ್‌ಗಳ ಬಗ್ಗೆ ಹೇಳುತ್ತಿದ್ದಾರೆ. ಇಲ್ಲಿ ರೈತರು ಮುಂದೆ ಇರಬೇಕೋ, ಹಿಂದೆ ಇರಬೇಕೋ, ಡಾಕ್ಟರ್‌ಗಳು ಮುಂದೆ ಇರಬೇಕೋ ಎಂಬುದನ್ನು ಆಮೇಲೆ ನೋಡೋಣ. ಇಡೀ ರಾಜ್ಯದಲ್ಲಿ ವಟರ್‌ನರಿ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ. ಇದಕ್ಕೆ ಮಾನ್ಯ ಮಂತ್ರಿಯವರು ಏನು ಹೇಳುತ್ತಾರೆಂದರೆ ಕೆ.ಪಿ.ಎಸ್.ಸಿಯಿಂದ ಸೆಲೆಕ್ಷನ್ ಮಾಡುತ್ತೇವೆಂದು, ತಾವು ಕೆ.ಪಿ.ಎಸ್.ಸಿಯವರಿಗೆ ಅಭ್ಯರ್ಥಿಗಳನ್ನು ಸೆಲೆಕ್ಟ್ ಮಾಡಿ ಲಿಸ್ಟ್ ಕಳುಹಿಸಿ ಎಂದು ಹೇಳಿದ್ದೇವೆಂದು ಹೇಳುತ್ತೀರಿ. ಐದು ತಿಂಗಳುಗಳಾದರೂ ನೇಮಕ ಮಾಡಿಲ್ಲ. ಇದರಿಂದ ಏನಾಗಿದೆ ಎಂದರೆ ಆಸ್ಪತ್ರೆ ಇದ್ದರೆ ಡಾಕ್ಟರ್ ಇರುವುದಿಲ್ಲ, ಡಾಕ್ಟರುಗಳು ಇದ್ದ ಕಡೆ ಔಷಧಗಳು ಇರುವುದಿಲ್ಲ. ಆದುದರಿಂದ ಮಾನ್ಯ ರಾಜಣ್ಣನವರೇ ನಾವು ಹೇಳುವಂತಹ ಮಾತನ್ನು ಮಂತ್ರಿಯವರು ಕೇಳುವುದಿಲ್ಲ. ನೀವಾದರೂ ಹೇಳಿ. ತಾವು ಜನರ ಮೂಗಿಗೆ ತುಪ್ಪ ಹಚ್ಚುವಂತಹ ಕೆಲಸವನ್ನು ಮಾಡುತ್ತೀರಿ. ಕೆ.ಪಿ.ಎಸ್.ಸಿ ಯಿಂದ ಸೆಲೆಕ್ಷನ್ ಮಾಡುತ್ತೇವೆ. ಡಾಕ್ಟರ್‌ಗಳನ್ನು ನೇಮಿಸುತ್ತೇವೆ ಎಂದು ಹೇಳಿ, ಅದರ ಲಿಸ್ಟ್ ಬಂದು ಮೂರು ತಿಂಗಳಾದರೂ ಹಾಗೆ ಪೆಂಡಿಂಗ್ ಇಟ್ಟಿದ್ದೀರಲ್ಲಾ.

ಶ್ರೀ ಬಿ.ಬಿ. ನಿಂಗಯ್ಯ(ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, ಸದಸ್ಯರು ಹೇಳುವಂಥಾದ್ದು ನಿಜ. ಸುಮಾರು ಇನ್ನೂರು ಪೋಸ್ಟ್‌ಗಿಂತಲೂ ಹೆಚ್ಚಿಗೆ ವೆಟರ್‌ನರಿ ಆಫೀಸರ್ಸ್ ಹುದ್ದೆಗಳು ಖಾಲಿ ಇದೆ. ಈಗಾಗಲೇ ನಾವು ಇದಕ್ಕೆ ಕೆ.ಪಿ.ಎಸ್.ಸಿಯಿಂದ ಇಂಟರ್‌ವ್ಯೂ ಮಾಡಿ ಅದರ ಲಿಸ್ಟನ್ನು ಕಳುಹಿಸಿ ಕೊಡುವಂಥಾದ್ದಕ್ಕೆ ಮುಖ್ಯವಾಗಿ ಸರ್ಟಿಫಿಕೇಟ್ ವೆರಿಫಿಕೇಷನ್ ಆಯಿತು. ಇನ್ನೂ 2-3 ಮೂರು ಬಾಕಿ ಇದೆ. ಈಗಾಗಲೇ ಅದೂ ಕೂಡ ಮುಗಿದಿದೆ. Repeatedly we have spoken to the Chairman of the K.P.S.C and its Secretary. ಆ ಲಿಸ್ಟ್ ಇನ್ನು 8-10 ದಿವಸಗಳಲ್ಲಿ ಲಿಸ್ಟ್ ಬರಬಹುದು. ಇದು ಬಂದ ತಕ್ಷಣ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆ ಅಲ್ಲೆಲ್ಲಾ ಡಾಕ್ಟರುಗಳನ್ನು ನೇಮಕ ಮಾಡುತ್ತೇವೆ. ಇದರ ಜೊತೆಗೆ ವಿ ಎಲ್ ಐ ಗಳ ಬಗ್ಗೆಯೂ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಇದನ್ನು ಇನ್ನು 10-15 ದಿವಸಗಳಲ್ಲಿ ಪೋಸ್ಟ್ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮುಖ್ಯವಾದ ಇನ್ನೊಂದು ವಿಚಾರವೇನೆಂದರೆ. ಲೋಕಸೇವಾ ಆಯೋಗದಿಂದ ಆರಿಸಿದಂತಹ ಅಭ್ಯರ್ಥಿಗಳಿಗೆ ಕೆಲವು ಸಂದರ್ಭಗಳಲ್ಲಿ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುವುದಕ್ಕೆ ವರ್ಷಾನುಗಟ್ಟಲೆ ತಡವಾಗಲು ಕಾರಣವೇನೆಂದರೆ. ಆಯ್ಕೆಯಾದವರ ಪಟ್ಟಿಯಲ್ಲಿರುವ ಎಲ್ಲರ ಸರ್ಟಿಫಿಕೇಟ್‌ಗಳು ವೆರಿಫಿಕೇಷನ್‌ಗೆ ಬರಬೇಕಾಗಿತ್ತು.

ಅದರಲ್ಲಿ ಕೆಲವು ಅಭ್ಯರ್ಥಿಗಳು ಕೊಟ್ಟಿರುವಂತಹ ವಿಳಾಸದಲ್ಲಿರುವುದಿಲ್ಲ. ಬೇರೆ ಕಡೆಗಳಿಗೆ ಹೋಗಿರುತ್ತಾರೆ. ಈ ಕಾರಣದಿಂದ ಅವರ ಸರ್ಟಿಫಿಕೇಟ್‌ಗಳು ವೆರಿಫಿಕೇಷನ್ ಆಗದೇ ತಡವಾಗಿದೆ. ಈ ವಿಚಾರ ಕಳೆದ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗಿ ಇದರ ಬಗ್ಗೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತಹ ಕಾನೂನು, ನಿಯಮಾವಳಿಗಳು ಏನಿವೆ. ಅದಕ್ಕೆ ವೆರಿಫಿಕೇಷನ್‌ಗೆ ಬರಲಿ, , ಬರದೇ ಹೋಗಲಿ ಅವರಿಗೆ ತತ್‌ಕ್ಷಣ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡಬೇಕೆಂದು ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ಈಗಾಗಲೇ ಇನ್‌ಫಾರ್ಮಲ್ ಆಗಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಮಾತ್ರವಲ್ಲ, ಕರ್ನಾಟಕ ಲೋಕಸೇವಾ ಆಯೋಗದಿಂದ ಸೆಲೆಕ್ಟ್ ಆಗಿರುವಂತಹ ಪ್ರತಿಯೊಂದು ಹುದ್ದೆಗಳಿಗೂ ಅನ್ವಯವಾಗುವಂತೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದುದರಿಂದ ಈ ತೊಡಕು ಏನಿದೆ. ಅದನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡುತ್ತೇವೆಂದು ಈ ಸಭೆಯು ಗಮನಕ್ಕೆ ತರಲಿಚ್ಚಿಸುತ್ತೇನೆ.

ಶ್ರೀ.ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ 250 ಅಭ್ಯರ್ಥಿಗಳಲ್ಲಿ ಇನ್ನೂರು ಅಭ್ಯರ್ಥಿಗಳು ಸರ್ಟಿಫಿಕೇಟ್ ಆಗಿದೆ. ಅವರಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಅನ್ನು ಇಷ್ಯೂ ಮಾಡಿ.

ಶ್ರೀ ಸಿ. ಬೈರೇಗೌಡ : ಈ ವಿಚಾರವನ್ನು ನಾನೇ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದರ ಪಟ್ಟಿಯೂ ಸಹ ನನ್ನ ಹತ್ತಿರವಿತ್ತು. ಮಾನ್ಯ ನಿಂಗಯ್ಯನವರು ಹೇಳಿದ ಹಾಗೆ ಅವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೂರು ಜನ ಅಭ್ಯರ್ಥಿಗಳ ಬಗ್ಗೆ ಇದ್ದಂತಹ ತೊಡಕು ತೊಡಕು ಏನೆಂಬುದನ್ನು ಹೇಳಿದ್ದಾರೆ. ಅದಕ್ಕೆ ನಿಯಮಾವಳಿಯ ತಿದ್ದುಪಡಿ ತರುವಂಥಾದ್ದಕ್ಕೆ ನಾವು ಇನ್‌ಫಾರ್ಮಲ್ ಆಗಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. Statutory period, notice ಎಂದು. ಇದೆ. ಅದನ್ನು ಅನುಸರಿಸಿ ಆದಷ್ಟು ಜಾಗ್ರತೆ ತಿದ್ದುಪಡಿ ಮಾಡುತ್ತೇವೆ. ಇದನ್ನು ಈಗಿರುವಂತಹ ನಿಯಮಾವಳಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದಲೇ ನಾವು ತಿದ್ದುಪಡಿ ತರಬೇಕೆಂದು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನನ್ನ ಪಾಯಿಂಟ್ ಅದಲ್ಲ, ನಾನು ಹೇಳುವಂಥಾದ್ದು ಸರ್ಟಿಫಿಕೇಟ್ ವೆರಿಫಿಕೇಷನ್ ಮಾಡುವಂತಹ ಪದ್ಧತಿ ಒಳ್ಳೆಯದಿದೆ. ಅದು ಆಗಬೇಕು, ಅದಕ್ಕೆ ತಿದ್ದುಪಡಿ ತರುವಂತಹ ಅಗತ್ಯವಿಲ್ಲ. ನಾನು ಹೇಳುವುದೇನೆಂದರೆ ಈಗ ಉದಾಹರಣೆಗೆ 250 ಜನ ಡಾಕ್ಟರುಗಳನ್ನು ಕೆ.ಪಿ.ಎಸ್.ಸಿಯಿಂದ ಸೆಲೆಕ್ಷನ್ ಮಾಡಿದೆ. ಅದರಲ್ಲಿ 200 ಜನ ಅಂಕಪಟ್ಟಿಗಳ ವೆರಿಫಿಕೇಷನ್ ಆಗಿ ಅದರ ಪಟ್ಟಿ ನಿಮಗೆ ಬಂದಿದೆ. ನಿಮ್ಮ ಪ್ರಕಾರ ಇನ್ನು ಮೂರು ಜನ ಅಭ್ಯರ್ಥಿಗಳು ಬಂದಿಲ್ಲವೆಂದು ಹೇಳುತ್ತಿದ್ದೀರಿ. ಅವರಲ್ಲಿ ಐವತ್ತು ಜನರು ಬರದಿದ್ದರೂ ಪರವಾಗಿಲ್ಲ, ಯಾವಾಗ ಅಭ್ಯರ್ಥಿಗಳು ಬರುತ್ತಿದ್ದಾರೆ, ಅಂಥವರನ್ನು ನೇಮಕ ಮಾಡಿಕೊಳ್ಳುವಂಥಾದ್ದಕ್ಕೆ ತಿದ್ದುಪಡಿಯನ್ನು ಮಾಡಿ ನೀವು ವೆರಿಫಿಕೇಷನ್ ಮಾಡುವಂಥಾದ್ದು ಬೇಡವೆಂದು ಮಾಡಬೇಡಿ.

ಶ್ರೀ ಕೆ.ಎನ್. ನಾಗೇಗೌಡ (ಭೂರಿ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಾವು

ಹೇಳುವಂಥಾದ್ದು ಸರಿಯಾಗಿದೆ. ಆದರೆ ಪಬ್ಲಿಕ್ ಸೆಲೆಕ್ಷನ್ ಆ್ಯಕ್ಟ್ ಅಡಿಯಲ್ಲಿ ಒಂದು ಸಾರಿ ಇಂಟ್ರೂವ್ಯೂ ಮಾಡಿ ಪ್ರೋಸಸ್ ಮಾಡಿದರೆ. ಅದು ಒಂದು ಪಾರ್ಟ್ ಆಗುತ್ತದೆ. ಒಂದು ಸಾರಿ ನೂರು ಜನರ ಇಂಟರ್‌ವ್ಯೂ ಆಗಿ ಅದರಲ್ಲಿ ತೊಂಭತ್ತು ಜನರ ಸರ್ಟಿಫಿಕೇಟ್ ವೆರಿಫಿಕೇಷನ್ ಆಗಿ ಉಳಿದ ಹತ್ತು ಜನರಿಗೊಸ್ಕರವಾಗಿ ಉಳಿದ ತೊಂಬತ್ತು ಜನರನ್ನು ಏಕೆ ಹೆಲ್ಡ್ ಆಫ್ ಮಾಡಬೇಕೆಂಬುದು ನಿಮ್ಮ ಪ್ರಶ್ನೆಯಾಗಿದೆ. ಅದಕ್ಕೆ ಕೃಷಿ ಸಚಿವರು ಇದಕ್ಕೆ ಕಾನೂನು ತಿದ್ದುಪಡಿ ಮಾಡಬೇಕೆಂದು ಹೇಳುತ್ತಿರುವುದು.

ಶ್ರೀ ಸಿ. ಬೈರೇಗೌಡ : ಈ ವಿಷಯವನ್ನು ನಾನೇ ಸಚಿವ ಸಂಪುಟದಲ್ಲಿ ಪ್ರಸ್ತಾಪ ಮಾಡಿದ್ದು, ಇದರ ಪಟ್ಟಿಯು ನನ್ನ ಹತ್ತಿರವಿತ್ತು. ಇದಕ್ಕೆ ಬದಲಾವಣೆ ಮಾಡುವಂತಹ ಅಗತ್ಯವಿದೆ ಎಂದು ನಾನು ಹೇಳಿ ಅದಕ್ಕೆ ತಕ್ಕಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಈಗಾಗಲೇ ನೀಡಲಾಗಿದೆ.

ಶ್ರೀ. ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೇ, ಈ ದೇಶದ ಬೆನ್ನೆಲುಬು ರೈತ ಎಂದು ಎಲ್ಲಾ ರಾಜಕಾರಣಿಗಳು ಹೇಳುತ್ತೀರಿ. ರೈತ ನಮ್ಮ ಬೆನ್ನೆಲುಬು, ರೈತನ ಬೆನ್ನೆಲುಬು ಯಾರೆಂದರೆ...

ಶ್ರೀ ಬಿ. ರಾಮವಾಥ ರೈ : ನಿಮ್ಮೊಬ್ಬರನ್ನು ಬಿಟ್ಟು ಉಳಿದವರೆಲ್ಲರೂ ರಾಜಕಾರಣಿಗಳು...

ಶ್ರೀ ಎಸ್. ರಾಜಣ್ಣ : ನಾನು ಸೇರಿ ಎಂದು ಹೇಳುತ್ತಿರುವುದು. ಎಲ್ಲರೂ ರೈತ ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತೀರಿ. ಆದರೆ ರೈತನಿಗೆ ಬೆನ್ನೆಲುಬು ಯಾವುದೆಂದರೆ ಜೋಡಿ ಎತ್ತುಗಳು. ಇದು ಇಲ್ಲವೆಂದರೆ ಅವನ ಕೆಲಸ ಸರಿಯಾಗಿ ನಡೆಯುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಅಮೃತ್ ಮಹಲ್ ತಳಿ ಮತ್ತು ಹಳ್ಳಿಖೇಡ್ ಎಂದು ಎರಡು ವಿಧಗಳು ಇವೆ. ಮೊದಲನೆಯ ಅಮೃತ ಮಹಲ್ ತಳಿಯು ಬಹಳ ಉತ್ಕೃಷ್ಟವಾದ ಮತ್ತು ರೈತನಿಗೆ ಉಪಯೋಗವಾಗುವಂತಹ ತಳಿಯಾಗಿದೆ. ಇದನ್ನು ಅಜ್ಜಂಪುರ ತಾಲ್ಲೂಕಿನಲ್ಲಿ ಸಾವಿರದ ಆರುನೂರು ಎಕರೆಯಲ್ಲಿ ಈ ಉತ್ತಮವಾದಂತಹ ತಳಿಯನ್ನು ಸಾಕಲಾಗುತ್ತಿದೆ. ಇದನ್ನು ಆರು ಜಿಲ್ಲೆಗಳಲ್ಲಿ ಒಟ್ಟು ವಿಸ್ತೀರ್ಣ 28,88,636 ಹೆಕ್ಟಾರ್ ಜಾಗದಲ್ಲಿ ಸಾಕಲಾಗುತ್ತಿದೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇಷ್ಟು ವಿಸ್ತೀರ್ಣವಾದಂತಹ ಜಾಗದಲ್ಲಿ ಕೇವಲ 1,600 ತಳಿಗಳನ್ನು ಸಾಕಿ ಡೆವಲಪ್ ಮಾಡುವುದರ ಬದಲು ಹದಿನಾರು ಸಾವಿರ ತಳಿಗಳನ್ನು ಸಾಕುವುದಕ್ಕೆ ಏಕೆ ಪ್ರಯತ್ನ ಮಾಡಬಾರದೆಂದು ಕೇಳುತ್ತಿದ್ದೇನೆ. ಈ ತಳಿಗಳನ್ನು ಜಾಸ್ತಿ ಮಾಡಿದರೆ ರೈತನಿಗೆ ಕನಿಷ್ಟ ವರ್ಷದಲ್ಲಿ ಐದು ನೂರು ಜೊತೆ ಎತ್ತುಗಳನ್ನು ಕಡಿಮೆ ಬೆಲೆಯಲ್ಲಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈ ತಳಿಯು ಭಾರ ಎಳೆಯುವಂತಹ ಶಕ್ತಿಯನ್ನು ಹೊಂದಿದೆ ಮತ್ತು ಭೂಮಿಯು ಫಲವತ್ತಾಗಿರುತ್ತದೆ. ಆದುದರಿಂದ ಈ ತಳಿಗ ಪ್ರೋತ್ಸಾಹ ಕೊಟ್ಟು 1,600 ತಳಿಯಿಂದ 16,000 ತಳಿಗಳನ್ನು ಮಾಡಿ ಈ ಹೋರಿ ಕರುಗಳನ್ನು ರೈತನಿಗೆ ಉಚಿತವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಹಳ್ಳಿಖೇಡ್ ತಳಿಯು ಕುಣಿಕೇನಾ ಹಳ್ಳಿಯಲ್ಲಿ375 ಎಕರೆಯಲ್ಲಿದೆ. ಇದನ್ನು ಪಶುಸಂಗೋಪನಾ ಇಲಾಖೆಯವರು ಏಕೆ ಇಷ್ಟು ಕಡಿಮೆ ಮಾಡಿದರೆಂಬ ಕಾರಣವನ್ನು ಕೇಳುತ್ತಿದ್ದೇನೆ. ಈ 375 ಎಕರೆ ಜಾಗದಲ್ಲಿ ನೂರು ತಳಿಗಳ್ನು ಇಟ್ಟಿರುವಂತಹ ಜಾಗದಲ್ಲಿ ಕನಿಷ್ಟ ಅಲ್ಲಿ ಎರಡು ಸಾವಿರ ತಳಿಗಳನ್ನಾದರೂ ಸಾಕಬೇಕು. ಅದನ್ನು ಸಾಕಿ ಉತ್ತಮವಾದಂತಹ ಹೋರಿ

ಕರುಗಳನ್ನು ರಾಜ್ಯದ ಘನಿಕೃತ ವೀರ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತದೆಂದು ಹೇಳಿದ್ದೀರಿ. ಇದರ ಜೊತೆಗೆ ತಾವು ಒಂದು ಸಾವಿರ ತಳಿಗಳನ್ನು ರೈತನಿಗೆ ಕೊಡುವಂಥಾದ್ದನ್ನು ಕಾರ್ಯರೂಪಕ್ಕೆ ತರಬೇಕು. ಈ ಎತ್ತುಗಳು ನಮ್ಮ ದೇಶಕ್ಕೆ ಆದಾಯ ತರುವಂತಹ ಕೆಲಸವನ್ನು ಮಾಡುತ್ತವೆ.

12.40 ಪಿ.ಎಂ

ಎತ್ತುಗಳು ರೈತನಿಗೆ ಬಹಳ ಮುಖ್ಯವಾದವು. ಇವತ್ತು ವರ್ಷಕ್ಕೆ ಜಾನುವಾರುಗಳಿಂದ ಎಂಭತ್ತು ಸಾವಿರ ಕೋಟಿಯಷ್ಟು ಹಾಲು, ಸಗಣಿ, ಮಾಂಸ, ಚರ್ಮ ಮತ್ತು ಅದರ ಕೆಲಸದಿಂದ ಆದಾಯ ಈ ದೇಶದಲ್ಲಿದೆ. ವರ್ಷಕ್ಕೆ ಎತ್ತುಗಳು ಗಾಡಿ ಸಾಗಾಣಿಕೆ ಮಾಡುವುದರಿಂದ.....

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ 1995ರ ಒಂದು ಸಮೀಕ್ಷೆಯ ವರದಿ ಪ್ರಕಾರ ಈ ಜಾನುವಾರುಗಳ ಉತ್ಪನ್ನ ಸುಮಾರು ಒಂದು ಲಕ್ಷದ ಎಂಭತ್ತು ಮೂರು ಸಹಸ್ರ ಕೋಟಿ ಎಂದು ಒಂದು ಅಂಕಿಅಂಶಗಳ ವರದಿ ಹೇಳುತ್ತದೆ. ಹಾಗಾಗಿ ತಾವು ಹೇಳಿದ ಅಂಕಿಅಂಶಗಳು ಸರಿಯಾಗಿಲ್ಲ.

ಶ್ರೀ ಎನ್. ರಾಜಣ್ಣ : ಅಂಕಿಅಂಶಗಳನ್ನು ಸರಿಪಡಿಸಿಕೊಳ್ಳಬಹುದು, ಕೆಲಸ ಮುಖ್ಯ. ಈ ಜಾನುವಾರುಗಳು ಸಾಗಾಣಿಕೆಯಲ್ಲಿ ಕೆಲಸ ಮಾಡುವುದರಿಂದ ವರ್ಷಕ್ಕೆ ಆರು ಕೋಟಿಗಳಷ್ಟು ಇಂಧನ ಉಳಿತಾಯವಾಗುತ್ತದೆ. ಇದರ ಬೆಲೆ ಕನಿಷ್ಟ ಕಡಿಮೆ ಎಂದರೆ ಇಪ್ಪತ್ತು ಸಾವಿರ ಕೋಟಿಯಾಗುತ್ತದೆ. ಇಷ್ಟು ಉಳಿತಾಯ ಈ ಎತ್ತುಗಳಿಂದ ದೇಶಕ್ಕಾಗುತ್ತಿದೆ. ಆದುದರಿಂದ ನಾನು ತಮ್ಮನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಅಮೃತ್ ಮಹಲ್ ಮತ್ತು ಹಳ್ಳಿಕಾರ್ ತಳಿಗಳನ್ನು ಉದ್ಧಾರ ಮಾಡಿ ರೈತರಿಗೆ ಉಚಿತವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಒಂದು ಎಚ್ಚರಿಕೆ ವಹಿಸಬೇಕಾದ್ದು ಏನೆಂದರೆ ಪಶುಸಂಗೋಪನಾ ಇಲಾಖೆಯವರು ಸರಿಯಾಗಿ ನಿರ್ವಹಣೆ ಮಾಡುವುದಿಲ್ಲ ರೈತನು ಬಡವನಾಗಿರುತ್ತಾನೆ ಎತ್ತುಗಳು ಬಡವಾಗಿರುತ್ತವೆ. ಅದಕ್ಕೆ ಆದಷ್ಟು ಕಡಿಮೆ ಬೆಲೆಗೆ ಕೊಡಬೇಕು. ಅವನು ಆ ಎತ್ತನ್ನು ಚೆನ್ನಾಗಿ ಸಾಕಿಕೊಳ್ಳುವ ರೀತಿ ಮಾಡಬೇಕು, ಆಮೇಲೆ ಆ ಎತ್ತಿಗೆ ಜಾಸ್ತಿ ಹೊಡೆಯಬಾರದು. ಏಕೆಂದರೆ ಅದಕ್ಕೆ ಹೆಚ್ಚಿಗೆ ಬಲ, ಶಕ್ತಿ, ಇರುವುದಿಲ್ಲ ಆದರೂ ಹೊಡೆಯುತ್ತಾರೆ, ಆ ಪ್ರಾಣಿಗಳಿಗೆ ದಿನಕ್ಕೆ ಲಕ್ಷಾಂತರ ಏಟುಗಳು ಬೀಳುತ್ತವೆ. ಅದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಸರ್.

ಅಧ್ಯಕ್ಷರು : ರಾಜಣ್ಣನವರೇ ಎತ್ತುಗಳು ಎಲ್ಲಿದ್ದಾವೆ ನಮ್ಮ ಕ್ರಾಸ್ ಬ್ರೀಡ್ ಕೌಸ್ ಬಂದ ಮೇಲೆ ಎತ್ತುಗಳನ್ನು ಉಪಯೋಗಿಸಿ ಯಾರು ವ್ಯವಸಾಯ ಮಾಡುತ್ತಾರೆ. ನಾವು ಕ್ರಾಸ್ ಬೀಡ್ ಕೌಸ್‌ನಿಂದ ನಾವು ಹೋರಿ ನಿರೀಕ್ಷಿಸುತ್ತೇವೆಯೇ, ಹೆಣ್ಣು ಕರು ಬಂದರೆ ತಾನೇ ರೈತ ಉದ್ಧಾರವಾಗುವುದು, ಹೋರಿ ಹುಟ್ಟಿದರೆ ಏನು ಮಾಡುತ್ತೇವೆ?

ಶ್ರೀ ಎನ್. ರಾಜಣ್ಣ : ತಾವು ಹೇಳುವುದರಲ್ಲಿ ಸತ್ಯಾಂಶವಿದೆ. ಆದರೆ ಇವತ್ತು ಟ್ರಾಕ್ಟರ್‌ಗಳಿಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿದೆ, ಇಂಧನವನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ.

ನೀವು ಹೇಳುವುದರಲ್ಲಿ ನೂರಕ್ಕೆ ನೂರರಷ್ಟು ಸತ್ಯಾಂಶವಿದೆ. ಎತ್ತುಗಳೆಲ್ಲಾ ಹೋಗಿಬಿಡ್ತು, ಯಾಂತ್ರಿಕ ಜೀವನವಾಗಿದೆ.

ಅಧ್ಯಕ್ಷರು : ಅದನ್ನು ಹೇಳಿ, ಮಾನವ ಶಕ್ತಿ ಹೋಗಿ ಕೃಷಿಯನ್ನೂ ಕೂಡ ನಾವು ಮೆಷಿನ್ ಪವರ್‌ನಿಂದ ಮಾಡುತ್ತಿದ್ದೇವೆ. ಪಾಲಿಷ್ ಅಕ್ಕಿಯನ್ನು ತಿಂದು, ತೌಡಿಲ್ಲ ಏನೂ ಇಲ್ಲ.

ಶ್ರೀ ಎನ್. ರಾಜಣ್ಣ : ಅದಕ್ಕೆ ನಾವು ಎತ್ತುಗಳಿಗೆ ಜಾಸ್ತಿ ಮುತುವರ್ಜಿಯನ್ನು ಕೊಟ್ಟು ಎತ್ತುಗಳನ್ನು ರೈತರಿಗೆ ಕೊಡಬೇಕೆಂದು ನಾನು ಇಷ್ಟು ಹೊತ್ತು ಮಾತನಾಡಿದ್ದರಲ್ಲಿ ಸಲಹೆ ಕೊಟ್ಟಿದ್ದುದು. ಇನ್ನು ಕೆಎಂಎಫ್ ಬಗ್ಗೆ ಹೇಳುವುದಾದರೆ.

ಅಧ್ಯಕ್ಷರು : ಇನ್ನು ಕೆಎಂಎಫ್ ಇದ್ದೀರಲ್ಲಾ ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ? ಇನ್ನೊಂದು ಹತ್ತು ನಿಮಿಷಗಳಲ್ಲಿ ಮುಗಿಸಿ.

ಶ್ರೀ ಎನ್. ರಾಜಣ್ಣ : ಇನ್ನೊಂದು ಅರ್ಧ ಗಂಟೆಯಲ್ಲಿ ಮುಗಿಸಿಬಿಡುತ್ತೇನೆ. 1960-61ರಲ್ಲಿ ಸನ್ಮಾನ್ಯ ಮಾಜಿ ಮಂತ್ರಿಗಳಾದ ಎಂ.ವಿ. ಕೃಷ್ಣಪ್ಪನವರು ಪ್ರಾರಂಭ ಮಾಡಿ ಬೆಂಗಳೂರು ಡೈರಿಯಿಂದ ನಂತರ ಕೆಡಿಡಿಸಿ ಈಗ ಕೆಎಂಎಫ್ ಆಗಿ ನೂರ ಅರವತ್ತಾರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಈಗ 7,945 ಹಾಲು ಉತ್ಪಾದಕ ಗ್ರಾಮೀಣ ಸಹಕಾರ ಸಂಘಗಳು ಸ್ಥಾಪಿಸಲಾಗಿದ್ದು ಇವುಗಳಲ್ಲಿ 6,672 ಮಾತ್ರ ಕಾರ್ಯನಿರ್ವಹಿಸುತ್ತಿದೆ. ದಿನನಿತ್ಯ 13 ಲಕ್ಷದ 63 ಸಾವಿರ ಲೀಟರ್ ಹಾಲು ಉತ್ಪಾದನೆಯಾಗುತ್ತದೆಂದು ಹೇಳಿದ್ದೀರಿ. ದೇಶದಲ್ಲಿ ಕರ್ನಾಟಕ ಹಾಲು ಉತ್ಪಾದನೆಯಲ್ಲಿ ಆರನೇ ಸ್ಥಾನದಲ್ಲಿದೆ. ಇನ್ನೊಂದು ಏನು ಹೇಳುತ್ತಾರೆಂದರೆ, ಜನವರಿ ತಿಂಗಳಿನ 18 ಲಕ್ಷ 40 ಸಾವಿರ ಲೀಟರ್ ಹಾಲು ಉತ್ಪಾದನೆ ಮಾಡಿ ಇಷ್ಟು ಕಡಿಮೆಯಾಗುವುದಕ್ಕೆ. ಏನು ಕಾರಣವೆನ್ನುವುದು ಕೆಲವು ಅಧಿಕಾರಿಗಳಿಗೆ ಗೊತ್ತಿದೆ, ಇದು ಬಹಳ ಮುಖ್ಯವಾದುದು. ನನಗೆ ತಳಿದಂತೆ, ಕ್ಯಾಟ್ಲಿ ಫೀಡ್ಸ್ ಬೆಲೆ ಜಾಸ್ತಿಯಾಗಿದೆ; ಇದನ್ನು ನಿಯಂತ್ರಣ ಮಾಡಬೇಕು. ಬೇಸಿಗೆ ಕಾಲದಲ್ಲಿ ನೀರಿನ ಅಭಾವ, ಹಸಿ ಮೇವಿನ ಅಭಾವ ಇರುತ್ತದೆ. ಎರಡನೆಯದು ಮುಖ್ಯವಾಗಿ ಇವತ್ತು ಹಾಲು ಇಷ್ಟು ಕಡಿಮೆಯಾಗಬೇಕಾದರೆ. There are two seasons. Flush season, another lean season, ಈ ಫ್ಲಷ್‌ಸಿ ಸನ್‌ನಲ್ಲಿ ಕಾವಿಂಗ್ ಜಾಸ್ತಿಯಾಗುತ್ತವೆ. ಈ ಕರುಗಳನ್ನು ಜಾಸ್ತಿ ಮಾಡುವುದಕ್ಕೆ ವಿಜ್ಞಾನಿಗಳು, ವೈದ್ಯರುಗಳೆಲ್ಲಾ ಇದ್ದಾರೆ. you can use your idea to bring down caving period in December and January. ಏನೂ ಇಲ್ಲ ಹೀಟಿಂಗ್‌ಗೆ ಬಂದಾಗ ಒಂದೆರಡು ತಿಂಗಳು ಸ್ವಲ್ಪ ಮುಂದೂಡಬೇಕೆಂದು ರೈತನಿಗೆ ಹೇಳಬೇಕು. ಆ ಕಾವಿಂಗ್ ಸ್ವಲ್ಪ ಮುಂದಕ್ಕೆ ಹೋದರೆ ಇದರಲ್ಲಿ ಜನವರಿಯಲ್ಲಿ ಹಾಲು ಕಡಿಮೆಯಾಗುತ್ತದೆ. ಬೇಸಿಗೆ ಕಾಲದಲ್ಲಿ ಸ್ವಲ್ಪ ಹೆಚ್ಚಿಗೆ ಹಾಲು ಸಿಗಬಹುದೆಂದು ನನ್ನ ಅನುಭವದ ಮಾತಿನ ಸಲಹೆ ಮಿಕ್ಕಿದ್ದು ನಿಮಗೆ ಬಿಟ್ಟಿದ್ದು, Whatever action you can take.. ನಾನೂ ಮೊನ್ನೇನೂ ಹೇಳಿದೆ, ಹಾಲಿನ ಬೆಲೆಯನ್ನು 50 ಪೈಸೆ ಅಥವಾ ಒಂದು ರೂಪಾಯಿಗಳಷ್ಟು ಜಾಸ್ತಿ ಮಾಡಿದರೆ ನಾವೆಲ್ಲಾ ಬೊಬ್ಬೆ ಹೊಡೆಯುತ್ತೇವೆ. ಯಾವತ್ತೇ ಆಗಲಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿದರೆ ಬೊಬ್ಬೆ ಹೊಡೆಯುವುದಕ್ಕೆ ಹೋಗಬೇಡಿ ಇದು ಪೆರಿಷೇಬಲ್ ಐಟಂ. ಒಂದು ಲೀಟರ್ ಹಾಲಿಗೆ 50 ಪೈಸೆ, ಒಂದು ರೂಪಾಯಿ ಜಾಸ್ತಿ

ಮಾಡಿದರೆ ಬೊಬ್ಬೆ ಹೊಡೆಯುತ್ತೀರಿ, ನೀವು 200 ಎಂ.ಎಲ್. ಫಾಂಟಾಗೆ 10 ರೂಪಾಯಿಗಳನ್ನು ಕೊಡುತ್ತೀರಿ; ಒಂದು ಬಾಟ್ಲ್ ನೀರಿಗೆ 15 ರೂಪಾಯಿಗಳನ್ನು ಕೊಡುತ್ತೀರಿ. ಆದುದರಿಂದ ದಯವಿಟ್ಟು ಹಾಲಿನ ಬೆಲೆಯನ್ನು ಜಾಸ್ತಿ ಮಾಡಿದಾಗ ನಾವ್ಯಾರೂ ಕೂಡ ವಿರೋಧ ಮಾಡಬಾರದು. ರೈತ ಆರೋಗ್ಯದಿಂದ ಇದ್ದರೆ ಮಾತ್ರ ಹಾಲು ಉತ್ಪಾದನೆ ಮಾಡುತ್ತಾನೆ. ಇವತ್ತು ಜನ ತಿನ್ನುವ ಗೋಧಿ ನ್ಯಾಯಬೆಲೆ ಅಂಗಡಿಯಲ್ಲಿ ಐದು ರೂಪಾಯಿ, ದನ ತಿನ್ನುವ ಬೂಸ ಏಳು ರೂಪಾಯಿ ಅವನು ಅದನ್ನು ಹೇಗೆ ದನಕ್ಕೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಹಾಕಿ ಹಾಲು ಉತ್ಪಾದನೆ ಮಾಡಬೇಕು? ಅದಕ್ಕೋಸ್ಕರ ಯಾವುದೇ ಪಾರ್ಟಿ ಅಧಿಕಾರಕ್ಕೆ ಬರಬಹುದು. ಹೋಗಬಹುದು. ಆದರೆ ಈ ಹಾಲಿನ ವಿಚಾರದಲ್ಲಿ ಮಾತ್ರ ಅವರು ಹಾಲಿನ ಬೆಲೆಯನ್ನು ಮಾಡದಿದ್ದರೆ ಮಾರುಕಟ್ಟೆಯಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಯಾವಾಗ ನೀವು (ಸರ್ಕಾರದ ಮೇಲೆ) ಬಿದ್ದಾಗ ನಾವು ಅಧಿಕಾರಿಗಳನ್ನು ಕಡಿಮೆ ಏನು ಮಾಡಬೇಕೆಂದಾಗ, ಅವರು ನಾವು ಮಾಡುತ್ತೇವೆಂದು ಹೇಳಿ ಇಂಪೋರ್ಟ್ ಬಟರ್, ಇಂಪೋರ್ಟ್ ಪೌಡರ್ ಇವನ್ನು ಮಿಶ್ರಣ ಮಾಡಿ ಮಾರುಕಟ್ಟೆಗೆ ತಳ್ಳುತ್ತಾರೆ. ಅದಕ್ಕೆ ದಯವಿಟ್ಟು ಹಾಲಿನ ಬೆಲೆ ಜಾಸ್ತಿಯಾದರೆ ನಾವು ಚರ್ಚೆಗೆ ತೆಗೆದುಕೊಳ್ಳಬಾರದು ಇದು ಪೆರಿಷೆಬಲ್ ಐಟಂ. ಹಾಲು ಜಾಸ್ತಿಯಾಗಿ ಕೋಲಾರದಲ್ಲಿ ಫೈರಿಂಗ್ ಆಯಿತು, ಸನ್ಮಾನ್ಯ ಬೈರೇಗೌಡರಿಗೆ ಇದು ಗೊತ್ತಿದೆ. ಹಾಲು ಜಾಸ್ತಿಯಾಗಿ ಸೊಸೈಟಿಗಳು ವಿಲ್ಕ್ ಹಾಲಿಡೇ ಡಿಕ್ಲೇರ್ ಮಾಡಿದವು. ಯಾವುದೇ ಕಾರಣಕ್ಕೆ ಮಿಲ್ಕ್ ಹಾಲಿಡೇ ಡಿಕ್ಲೇರ್ ಮಾಡುದವುದಕ್ಕೆ ಹೋಗಬೇಡಿ; ರೈತನ ಮೇಲೆ ಗುಂಡು ಹಾರಿಸಬೇಡಿ. When KDDC was there, 1960 ರ ಕೆಡಿಸಿಸಿ ಆಕ್ಟ್‌ನಲ್ಲಿ; ಹಾಲನ್ನು ಬೆಂಗಳೂರಿನಿಂದ 30 ಕಿಮೀ ದೂರದಿಂದ ತೆಗೆದುಕೊಳ್ಳಬೇಕೆಂದಿದೆ. ಈ ಆಕ್ಟ್ ಅನ್ನು ಬಿಟ್ಟು ಬೆಂಗಳೂರು ರಿಂಗ್ ರೋಡ್ಸ್ ಹತ್ತಿರವೆಲ್ಲಾ ಹಾಲನ್ನು ತೆಗೆದುಕೊಂಡು ಬರಲು ಪ್ರಾರಂಭಿಸುತ್ತೀರಿ. ಅವರು ನಂತರ ಖಾಸಗಿಯವರಿಗೆ ಕೊಡುವುದಕ್ಕೆ ಆರಂಭಿಸುತಾರೆ. Start it away from the city, ಅವಾಗ ಯಾರೂ ಖಾಸಗಿಯವರು ಅವರ ಹತ್ತಿರ ಹೋಗಿ ಹಾಲನ್ನು ಕೊಂಡುಕೊಳ್ಳುವುದಿಲ್ಲ. ಮತ್ತೆ ಕೆಲವರು ಖಾಸಗಿಯವರು ವ್ಯಾಪಾರ ಮಾಡಿ ಬದುಕುತ್ತಿರುತ್ತಾರೆ, ಅವರಿಗೂ ಅಡಚಣೆಯಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ನಿರುದ್ಯೋಗಿಗಳು ಜಾಸ್ತಿ ಇದ್ದಾರೆ. ಆದ ಕಾರಣ ನೀವು ಕೆಎಂಎಫ್‌ನವರು ಸೊಸೈಟಿ ಮಾಡುವಾಗ ಬೆಂಗಳೂರಿನಿಂದ 30 ಕಿ.ಮೀ. ದೂರದಲ್ಲಿ ಮಾಡಿ, ಅಥವಾ ರಿಂಗ್‌ರೋಡ್‌ನಿಂದ 20 ಕಿ.ಮೀ. ದೂರದಲ್ಲಿ ಮಾಡಿ ಎಂದು 1960 ಆಕ್ಟ್‌ನಲ್ಲಿ ಇದೆ ಆದು ಜಾರಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ ಮಿಲ್ಕ್ ಪ್ರೊಡಕ್ಷನ್, ಹಾಲು ತುಪ್ಪ, ಬರ್ಫಿ ಇವುಗಳನ್ನೆಲ್ಲಾ ತಯಾರು ಮಾಡುವ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ, ಇದನ್ನು ತಾವು ಈ ಫ್ಲಷ್ ಸೀಸನ್‌ನಲ್ಲಿ ಆದಷ್ಟು ರೈತನಿಗೆ ಹಾಲು ಹಿಂದಕ್ಕೆ ಕೊಡದಂತೆ ಪ್ರೊಡ್ಯೂಸ್ ಮಾಡಬೇಕು, ಆದಷ್ಟು ಎಲ್ಲಾ ಕಡೆ ಕೋಲ್ಡ್ ಸ್ಟೋರೇಜ್ ಕಟ್ಟಿಸಿದರೆ. ಆಗ ರೈತನಿಗೆ ಹಾಲು ಹಿಂದಕ್ಕೆ ಕೊಡುವ ಪ್ರಶ್ನೆನೇ ಉದ್ಭವಿಸುವುದಿಲ್ಲ. When you start the milk product there is no necessity for sending the milk back to the farmers from the society ಆ ಗೋಳನ್ನು ನಾನು ನೋಡಿದ್ದೇನೆ. ಅದಕ್ಕೋಸ್ಕರ ಇದಾಗಬಾರದೆಂದು ಹೇಳ್ಳುತ್ತಿದ್ದೇನೆ.

Finally, our Ex-Prime Minister Sri H.D.Devegowda has done great work in this filed by getting one Animal Nutrition unit to NDRI. ಅವರು

ಪ್ರಧಾನಮಂತ್ರಿಯಾಗಿರುವಾಗ ನಾನು ಪತ್ರ ಬರೆದೆ. ಇವತ್ತು ಅಲ್ಲಿ ಅನಿಮಲ್ ನ್ಯೂಟ್ರಿಷನ್ ಪಾರಂಭವಾಗಿದೆ. ಅದರಲ್ಲಿ ಕನಿಷ್ಟ ಮುನ್ನೂರರಿಂದ ನಾನೂರು ಜನರಿಗೆ ಕೆಲಸ ಸಿಗುವ ಒಂದು ಮಟ್ಟಕ್ಕೆ ಬಂದಿದೆ. ಅದರಲ್ಲಿನ 20 ಕೋಟಿ ಇನ್‌ವೆಸ್ಟ್‌ಮೆಂಟನ್ನು ಇಲ್ಲಿ ಮಾಡಿಸಿದರು. ಇಲ್ಲದಿದ್ದರೆ ಅದು ಉತ್ತರ ಭಾರತದ ಕೆನಾಲ್‌ಗೆ ಹೋಗಿಬಿಡುತ್ತಿತ್ತು. ನಾನು ಬರೆದ ಪತ್ರಕ್ಕೆ ಅವರು ಇದನ್ನು ಶ್ರದ್ಧೆಯಿಂದ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಚಿರಋಣಿಯಾಗಿದ್ದೇನೆ ಎಂದು ನಾನು ಅವರಿಗೆ ನ್ಯಾಷನಲ್ ಡೈರಿ ಡೆವಲಪ್ ಮೆಂಟ್ ಬೋರ್ಡ್ ಪರವಾಗಿ ಹೇಳುತ್ತಿದ್ದೇನೆ. ಎರಡನೆಯದಾಗಿ, ಕೆಎಂಎಫ್‌ಗೆ ಐಸ್ ಕ್ರೀಂ ಪ್ಲಾಂಟ್ ಕೊಟ್ಟಿರಲಿಲ್ಲ. ಈ ದೇಶದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲಾ ಕಡೆ ಖಾಸಗಿಯವರು ಐಸ್ ಕ್ರೀಂಅನ್ನು ಮಾರುತ್ತಾರೆ. ಅದು ಕ್ವಾಲಿಟಿ ಇರಬಹುದು, ಜಾಯ್ ಇರಬಹುದು ,ಸಬ್ ಜೀರೋ ಇರಬಹುದು ಅಥವಾ ವಾಡಿವಾಲ್ ಇರಬಹುದು. ಆದರೆ ಸರ್ಕಾರದ ಸೊಸೈಟಿಗಳಿಗೆ ಐಸ್ ಕ್ರೀಂ ಪ್ಲಾಂಟನ್ನು ಕೊಟ್ಟಿರಲಿಲ್ಲ. ಈ ರೀತಿ ಕೊಟ್ಟರೆ ಬಡ ರೈತರು ಉದ್ಧಾರವಾಗುತ್ತಾರೆ ಎಂದು ಖಾಸಗಿ ಮಲ್ಟಿ ಮಿಲಿಯನೇರ್‌ಗಳಿಗೆ ಕೊಟ್ಟಿದ್ದು ಅವರು ಹಣ ಮಾಡುತ್ತಿದ್ದರು. ಆದರೆ ಅವರು ದೆಹಲಿಗೆ ಹೋದಮೇಲೆ ಸಂಯುಕ್ತ ರಂಗ ಸರ್ಕಾರದ ಸಹಕಾರದಿಂದ ಅದನ್ನು ಮಾಡಿದರು. ಅದರಿಂದಾಗಿ ಇವತ್ತು ಕೆ ಎಂಎಫ್‌ನ ಅಮೂಲ್ ಐಸ್ ಕ್ರೀಂ ಬಂದಿದೆ. ಇವತ್ತು ಕೆ ಎಂ ಎಫ್ ಗೆ ಐಸ್ ಕ್ರೀಂ ಪ್ಲಾಂಟ್ ಬಂದಿರುವುದರಿಂದ ಅವರು ಕಡಿಮೆಯೆಂದರೂ ದಿನಕ್ಕೆ. 5,000 ಲೀಟರ್ ಹಾಲನ್ನು ಕನ್‌ಸ್ಯೂಮ್ ಮಾಡುತ್ತಾರೆ. ಅದು ನಾಳೆ 10 ಸಾವಿರ ಅಥವಾ 20 ಸಾವಿರ ಲೀಟರ್‌ಗೆ ಹೋಗಬಹುದು. ನಾಳೆ ಅದು 20 ಸಾವಿರ ಲೀಟರ್‌ಗೆ ಬಂದರೆ ಅದರಿಂದ ಕನಿಷ್ಟವೆಂದರೆ 4 ಸಾವಿರ ರೈತರು ಉದ್ಧಾರವಾಗುತ್ತಾರೆ. ಐಸ್ ಕ್ರೀಂ ಪ್ರಾಡಕ್ಟ್ಸ್ ಹೊರಗಡೆ ಬಂದರೆ ಕನಿಷ್ಟ 2 ಸಾವಿರ ಜನ ನಿರುದ್ಯೋಗಿ ಪದವೀಧರರು ಅಂಗಡಿಗಳನ್ನು ಇಟ್ಟುಕೊಂಡು ಉದ್ಧಾರವಾಗುತ್ತಾರೆ. 4 ಸಾವಿರ ರೈತರು ಕನಿಷ್ಟ 5 ಸಾವಿರ ಹಸುಗಳನ್ನು ಕಟ್ಟಿದರೆ ಅವು ದಿನಕ್ಕೆ 8 ರಿಂದ 10 ತೊಪ್ಪೆ ಸಗಣಿ ಹಾಕಿದರೆ, ದಿನಕ್ಕೆ 80 ಸಾವಿರ ರೂಪಾಯಿ ಸಗಣಿಯಿಂದ ಬರುತ್ತದೆ. ಕಸದಿಂದ ರಸ ಎಂದು ಬಸವಣ್ಣನವರು ಹೇಳಿದ್ದಾರೆ. ನಮ್ಮ ಇಂಡಿಯನ್ ಎಕಾನಮಿ ಎಲ್ಲಿದೆ ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಅದು ಇರುವುದು ಮಣ್ಣಿನಲ್ಲಿ. ಅದನ್ನು ಉಳಿಸಬೇಕು. ಹೀಗೆ ಇದರಿಂದ ಅನೇಕ ರೀತಿಯ ಅನುಕೂಲಗಳು ಆಗುತ್ತವೆ. ಇಂಥ ಕೆಲಸವನ್ನು ಸನ್ಮಾನ್ಯ ದೇವೇಗೌಡರು ಮಾಡಿದ್ದಾರೆ. ರೈತರಿಗೆ ಇಷ್ಟೆಲ್ಲಾ ಅನುಕೂಲವಾಗುವಂಥಾ ಕೆಲಸವನ್ನು ಸನ್ಮಾನ್ಯ ದೇವೇಗೌಡರು ಕೆ.ಎಂ.ಎಫ್. ಗೆ ಐಸ್ ಕ್ರೀಂ ಪ್ಲಾಂಟನ್ನು ಕೊಡುವುದರ ಮೂಲಕ ಮಾಡಿದ್ದಾರೆ. ಹಿಂದೆ ಇದಕ್ಕೂ ಬಹಳ ಕಷ್ಟವಾಗಿತ್ತು. ಇವತ್ತು ಹಿಂದುಳಿದವರಿಗೆ 80 ಸಾವಿರ ಕೋಟಿ ಕೊಟ್ಟಿದ್ದಾರೆ. ಅದರಲ್ಲಿ ಶೇ. 60ರಷ್ಟು ಸಬ್ಸಿಡಿ, ಉಳಿದ ಶೇ. 40ರಷ್ಟು ಹಣವನ್ನು ಅವರು ಕೊಡಬೇಕು. ಹಿಂದುಳಿದ ವರ್ಗದವರಿಗೆ 13 ಲಕ್ಷ 80 ಸಾವಿರ ಹಸುಗಳನ್ನು ಕೊಟ್ಟಿದ್ದಾರೆ. ಪರಿಶಿಷ್ಟ ಜಾತಿಯವರಿಗೆ 21,470 ಹಸುಗಳನ್ನು ಕೊಟ್ಟಿದ್ದಾರೆ. ಈ ಮೇಲ್ಕಂಡ ಕಾರ್ಯ ಶ್ಲಾಘನೀಯವಾದುದು. ಇದರ ಜೊತೆಗೆ ನನ್ನ ಒಂದು ಸಲಹೆಯೆಂದರೆ, ಅವರಿಗೆ ಒಂದು ವರ್ಷ ಟ್ರೈನಿಂಗ್ ಕೊಡಬೇಕು. ಮಿನಿ ಡೈರಿಗಳನ್ನು ಮಾಡುತ್ತಿದ್ದಾರೆ. ಮಿನಿ ಡೈರಿ ಎಂದರೆ 5 ಹಸುಗಳನ್ನು ಕಟ್ಟ ಬೇಕಾದರೆ. ಅವರಿಗೆ ಒಂದು ವರ್ಷ ತರಬೇತಿ ಕೊಡಿ, ಮೂರು ತಿಂಗಳು ಮಿಲಿಟರಿ ತರಬೇತಿಯನ್ನು ಕೊಡಿ. ಅವರು ಬೆಳಿಗ್ಗೆ 4 ಗಂಟಗೇ

ಎದ್ದು ಬರಬೇಕು. ಅವರು 4 ಗಂಟೆ 5 ನಿಮಿಷಕ್ಕೆ ಬಂದರೂ 3 ದಿವಸ ವಾರ್ನಿಂಗ್ ಕೊಟ್ಟು ನಂತರ ವಾಪಸ್ಸು ಕಳುಹಿಸಿಬಿಡಿ. ಕರೆಕ್ಟ್ ಪಂಕ್ಚ್ಯುಯಾಲಿಟಿ ಇದ್ದರೆ ಮಾತ್ರ ನಿಮ್ಮ ಸೊಸೈಟಿ ಪಂಕ್ಚ್ಯುಯಲ್ ಆಗಿ ಇರುತ್ತದೆ. ಸೊಸೈಟಿ ಪಂಕ್ಚ್ಯುಯಲ್ ಆಗಿದ್ದರೆ ಅದರ ಉತ್ಪನ್ನಗಳಲ್ಲಿ ಕ್ವಾಲಿಟಿ ಇರುತ್ತದೆ. ಕ್ವಾಲಿಟಿ ಇದ್ದರೆ. ಬೆಂಗಳೂರಿನಲ್ಲಿ ಹಾಲನ್ನು ಸರಿಯಾಗಿ ಕೊಡುತ್ತಾರೆ. ಆಗ ಎಲ್ಲರೂ ಕೊಂಡುಕೊಳ್ಳುತ್ತಾರೆ. ಜನರೂ ಸುಭಿಕ್ಷವಾಗಿರುತ್ತಾರೆ ಎಂದು ಹೇಳುತ್ತಿದ್ದೇನೆ. ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಂಡು ಮಾಡಬೇಕು ಎಂದು ಹೇಳುತ್ತಿದ್ದೇನೆ. ನಾನು ಗ್ರೀನ್ ರೆವಲ್ಯೂಷನ್ ಮತ್ತು ವೈಟ್ ರೆವೆಲೂಷನ್‌ಗಳ ಬಗ್ಗೆ ಮಾತನಾಡುವಾಗ 9 ಅಂಗಾಂಗಗಳು ಬಹಳ ಮುಖ್ಯವಾದವು ಎಂದು ಹೇಳಿದ್ದೆ. ಆದರೆ ಈಗ ನನಗೆ ಮಾತನಾಡಲು ತಾವು ಹೆಚ್ಚು ಸಮಯ ಕೊಡದೇ ಇರುವುದರಿಂದ, ಈಗ ನಾನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇತ್ತೀಚೆಗೆ ಬೆಂಗಳೂರು ಮಹಾನಗರ ಪಾಲಿಕೆಗೆ 33 ವಾರ್ಡುಗಳು ಹೊಸದಾಗಿ ಸೇರ್ಪಡೆಯಾಗಿವೆ. ಪ್ರತಿಯೊಂದು ವಾರ್ಡಿನಲೂ ಕನಿಷ್ಟ 3 ರಿಂದ 4 ಹಾಫ್‌ಕಾಮ್ಸ್ ಮಳಿಗೆಗಳನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಜನರ ಅಭಿಪ್ರಾಯವೆಂದರೆ, ಹಾಫ್‌ಕಾಮ್ಸ್‌ನಲ್ಲಿ ಮಾರುವ ತಾಜಾ ತರಕಾರಿಗಳ ಬೆಲೆ ಮಾರುಕಟ್ಟೆಯಲ್ಲಿ ಸಿಗುವ ಬೆಲೆಗಿಂತ ಜಾಸ್ತಿ ಎಂಬ ಅಭಿಪ್ರಾಯವಿರುವುದರಿಂದ ಹಾಫ್‌ಕಾಮ್ಸ್‌ನಲ್ಲಿ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ತರಕಾರಿಗಳನ್ನು ಮಾರುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾದುದು. ಮತ್ತೊಂದು ವಿಚಾರವೆಂದರೆ. ನಾನು ಈ ವಿಚಾರವನ್ನು ಹೇಳುತ್ತೇನೆಂದು ಯಾರು ಬೇಜಾರು ಮಾಡಿಕೊಳ್ಳಬಾರದು. ಕಬ್ಬನ್ ಪಾರ್ಕಿನ ಸುತ್ತಲೂ ಗಾರ್ಡನ್‌ಅನ್ನು ಬೆಳೆಸುತ್ತಿದ್ದೇವೆ. ನಾನು ಹೇಳುವುದನ್ನು ತಾವು ಚಿಂತನೆ ಮಾಡಿ. ವಿಧಾನಸೌಧ ಸುತ್ತಲೂ ಇರುವ ರಾಜಭವನ ಮತ್ತಿತರ ಕಟ್ಟಡಗಳಿಂದ ಬರತಕ್ಕಂಥ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಪಮ್‌ನ ವೇಸ್ಟನ್ನು ಕಬ್ಬನ್ ಪಾರ್ಕಿನ ಮಧ್ಯದಲ್ಲಿ ಒಂದು ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಿ ತೆಗೆದುಕೊಂಡು ಆ ನೀರನ್ನು ಕಬ್ಬನ್ ಪಾರ್ಕಿನಲ್ಲಿರುವ ಮರಗಳಿಗೆ ಉಪಯೋಗಿಸಿದರೆ ಅದರಿಂದ ಶೇ.30 ರಿಂದ 40 ರಷ್ಟು ಆಮ್ಲಜನಕ ಜಾಸ್ತಿಯಾಗುತ್ತದೆ. ಏಕೆಂದರೆ ಇದರಲ್ಲಿ ಯಾವುದೇ ರೀತಿಯ ಕೆಮಿಕಲ್ಸ್, ಪಾಯಸನ್, ಇಲ್ಲ. ಬಹಳ ಜನಗಳಿಗೆ ಪರಿಸರ ಪ್ರಜ್ಞೆ ಇರುವುದಿಲ್ಲ. ಆ ಕೆಲಸ ಮಾಡಿ ನನಗೆ ಆ ಪ್ರಜ್ಞೆ ಇರುವುದರಿಂದ ಹೀಗೆ ಹೇಳುತ್ತಿದ್ದೇನೆ. ಹ್ಯೂಮನ್ ವೇಸ್ಟ್ ಬರುವುದನ್ನು ತೆಗೆದುಕೊಂಡು ಈ ರೀತಿ ಮಾಡಿದರೆ, it is a greatest achievement to Cubbon park. ಮತ್ತು ಬೆಳಿಗ್ಗೆ ಎದ್ದು ಅಲ್ಲಿಗೆ ವಾಕಿಂಗ್‌ಗೆ ಬರುವವರಿಗೂ ಶೇ.30ರಷ್ಟು ಹೆಚ್ಚು ಆಮ್ಲಜನಕ ಸಿಗುತ್ತದೆ. ಇದರಿಂದ ಆಮ್ಲಜನಕ ಜಾಸ್ತಿಯಾಗುವುದೇ ಅಲ್ಲದೆ ಆ ಮರಗಳಲ್ಲಿ ಬಿಡತಕ್ಕಂಥ ಹೂವಿನ ಸುವಾಸನೆಯೂ ಜಾಸ್ತಿಯಾಗುತ್ತದೆ. ಏಕೆಂದರೆ ವಿಧಾನಸೌಧದ ಸುತ್ತಲೂ ಕೆಮಿಕಲ್ಸ್ ಇಲ್ಲ. ಅಲ್ಲಿ ಸರ್ಕಾರಿ ಕಛೇರಿಗಳು ಇವೆ. ಆದ್ದರಿಂದ ಇದನ್ನು ಈ ರೀತಿ ಉಪಯೋಗಿಸಿದರೆ ಬಹಳ ಒಳ್ಳೆಯದು ಎಂದು ನನ್ನ ಸಲಹೆ. I think the Hon'ble Minister will take serious note about this and think over this and see that this plant is ready within the next year within our term. ಇನ್ನು ಮೀನಿನ ಬಗ್ಗೆ ಹೇಳಬೇಕಾದರೆ ,ಬೆಂಗಳೂರಿನಲ್ಲಿ ಕಡಿಮೆ ಬೆಲೆಗೆ ಮೀನು ಸಿಗುತ್ತಿಲ್ಲ. ಸಮುದ್ರ ತೀರದಲ್ಲಿರುವವರಿಗೆ ಕಡಿಮೆ ಬೆಲೆಗೆ

ಸಿಗುತ್ತದೆ. ಆದರೆ ಇಲ್ಲಿ ಸಿಗುವುದು ಬಹಳ ಕಷ್ಟವಾಗಿದೆ. ಉದಾಹರಣೆಗೆ ಹೇಳುತ್ತೇನೆ, ನಾನು ಒಂದು ದಿನ ರಾತ್ರಿ ಮಲಗಿಕೊಂಡಿದ್ದೆ, ಆಗ ರಾತ್ರಿ 11 ಗಂಟೆಯಾಗಿತು. ಆಗ ಪೀಸಾ ಎನ್ನುವ ರೆಸ್ಟೋರೆಂಟ್‌ನಿಂದ ಒಬ್ಬ ಬಾಕ್ಸ್‌ನಲ್ಲಿ ತೆಗೆದುಕೊಂಡು ಬಂದು ಗೇಟನ್ನು ಶಬ್ದ ಮಾಡಿದ. ನಾನು, ಯಾರಪ್ಪಾ ನೀನು, ಏನು ವಿಷಯ ಎಂದು ಕೇಳಿದ್ದಕ್ಕೆ ಅವನು ಒಂದು ಬಿಲ್ ಕೊಟ್ಟ. He knows that one omlette will cost in Bangalore, Rs.148/-.

ರಾತ್ರಿ 11 ಗಂಟೆಗೆ ತೆಗೆದುಕೊಂಡು ಬರುತ್ತಾನೆ. 4 ತುಂಡು ಮೀನು ಇಟ್ಟಿರುತ್ತಾನೆ, ಅದಕ್ಕೆ 160 ರೂಪಾಯಿ. ಅದನ್ನು ಒಂದು ಬಾಕ್ಸ್‌ನಲ್ಲಿ ಅಂದರೆ ಹಾಟ್ ಕೇಸ್‌ನಲ್ಲಿ ತೆಗೆದುಕೊಂಡು ಬರುತ್ತಾರೆ. ಅಂಥ ಜನರು ಬೆಂಗಳೂರಿನಲ್ಲಿದ್ದಾರೆ. ನಾನು ಅಂಥವರ ಮಧ್ಯದಲ್ಲಿದ್ದೇವೆ. ಬಡವನಿಗೆ ಫುಟ್‌ಪಾತನಲ್ಲಿ 4 ರೂಪಾಯಿಗೆ ಅನ್ನ ಸಿಗುತ್ತದೆ. ಅದೇ ಹೋಟೆಲ್‌ಗೆ ಹೋದರೆ 40 ರೂಪಾಯಿ ಆಗುತ್ತದೆ. ಬಡವ ಪೈವ್ ಸ್ಟಾರ್ ಹೋಟೆಲ್‌ಗೆ ಹೋಗಿ ಮೀನು ತಿನ್ನಬೇಕೆಂದರೆ ಅಲ್ಲಿ ಪ್ಲೇಟ್ ಮುಟ್ಟಿದರೆ ಸಾಕು 400 ರೂಪಾಯಿ ಕೊಡಬೇಕು. ಅದಕ್ಕೋಸ್ಕರ ಹೆಚ್ಚು ಫಿಷ್ ಸ್ಟಾಲ್‌ಗಳನ್ನು ಇಲ್ಲಿ ನೀವು ತೆರೆಯಬೇಕು. ಇನ್ನು ಟ್ಯಾಂಕುಗಳ ಬಗ್ಗೆ ಹೇಳುವುದಾದರೆ ಅವು ಕುಲಗೆಟ್ಟು ಹೋಗಿವೆ. ರಾಮನಗರ ಎಂಎಲ್‌ಎ ಯವರು, ಅಶ್ವತ್ಥನಾರಾಯಣ ರೆಡ್ಡಿಯವರು ಹೇಳುತ್ತಿದ್ದರು, ಒಂದು ಕಾಲದಲ್ಲಿ ಆ ಕೆರೆಗಳು ಬಹಳ ಶುದ್ಧವಾಗಿದ್ದವು ಎಂದು. ಆದರೆ ಈಗ ಅವು ಕೊಳೆತು ನಾರುತ್ತಿವೆ. ಅದರಲ್ಲಿ ಮೀನುಗಳು, ಪಕ್ಷಿಗಳು ಉಳಿಯುವುದಿಲ್ಲ. ಸಣ್ಣ ಕ್ರಿಮಿಗಳೂ ಇಲ್ಲ. ಬರೀ ಸೊಳ್ಳೆಗಳು ಉತ್ಪಾದನೆಯಾಗುತ್ತಿವೆ. ಪಾರ್ವತಿ ಪರಮೇಶ್ವರರು ಮನುಷ್ಯರಿಗೆ ಜೀವವನ್ನು ಕೊಟ್ಟರು. ಆದರೆ ಇವತ್ತು ನಾವು ಸೊಳ್ಳೆಗಳಿಗೆ, ನೊಣಗಳಿಗೆ ಕಾಯಿಲೆಗಳಿಗೆ ಜೀವ ಕೊಡುತ್ತಿದ್ದೇವೆ. ಈ ಟ್ಯಾಂಕುಗಳನ್ನು ಕ್ಲೀನ್ ಮಾಡಿದರೆ ಬಡವರಿಗೆ ಅಲ್ಲಿ ಮೀನು ಸಿಗುತ್ತದೆ ಎಂದು ನಾನು ಸಲಹೆ ಮಾಡುತ್ತಿದ್ದೇವೆ. ಕೊನೆಯದಾಗಿ, 28ನೇ ತಾರೀಖು ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರಿ. ಅವತ್ತು 6 ಗಂಟೆಗೆ 50 ನಿಮಿಷಕ್ಕೆ ನನ್ನ ಮಾತನ್ನು ನಿಲ್ಲಿಸಿದ್ದೆ. ಇವತ್ತು ಮತ್ತೆ ತಾವು ಅವಕಾಶ ಕೊಟ್ಟಿದ್ದೀರಿ. I am grateful to you and all our Hon'ble Members for listening to my speech for few minutes, including Shri. Sageer Ahmed.

MR. SPEAKER : We are also thankful to you for addressing the house.

ಶ್ರೀ ಎನ್. ರಾಜಣ್ಣ : ನಾನು ಅವತ್ತು ಹೇಳಿದೆ Where is Indian economy? ಇಂಡಿಯನ್ ಎಕಾನಮಿ ಇರುವುದು ಮಣ್ಣಿನಲ್ಲಿ ಇದನ್ನು ನಾನು ಹೇಳಿದ್ದಲ್ಲ ಮಹಾತ್ಮಗಾಂಧೀಜಿಯವರು ಹೇಳಿದ್ದು ನಾನು ಹೇಳಿದ್ದಲ್ಲ. ಕೆಲವು ಅನುಭವಸ್ಥರು ಹೇಳಿದ್ದು.

MR. SPEAKER : Now we will leave Indian economy in the soil and close.

SRI. N. RAJANNA : According to Prof. Nanjundappa,Vice Chairman, Planning Board, our country is not sufficient in urea. He says, urea has to be

imported from the foreign countries. The fertiliser consumption is still very low in several states compared to national average of 120 kgs and higher, like 165 or above. May be ,200 kgs., per acre. India being a free dominated agricultural economy, cannot depend upon import of fertilisers or production of fertlisers, in a private undertaking which may have an important share in the Indian Market. Sir, I asked where is the gold mine. Gold mine is not in the KGF Gold mine is in 60 ಲಕ್ಷ ಜನಸಂಖ್ಯೆ ಎಲ್ಲಿ ಈ ಕಸ ತೆಗೆದುಕೊಂಡು ಹೋಗಿ ಕೆಡವುತ್ತಿದ್ದಾರಲ್ಲಾ, ಅದೇ ಗೋಲ್ಡ್ ಮೈನ್ ಎಂದು ಹೇಳಿ ಮೊನ್ನೆ ಭಾಷಣದಲ್ಲಿ ಹೇಳಿದ್ದೇನೆ. ಅದಕ್ಕೋಸ್ಕರ ಈ ವೇಸ್ಟನ್ನು ಯಾವ ತರಹ ಉಪಯೋಗಿಸಿದರೆ ಗೊಬ್ಬರ ಮಾಡಿದರೆ ನಮಗೆ ಕೋಟ್ಯಾಂತರ ರೂಪಾಯಿ ಉಳಿದು ದೇಶದ ಎಲ್ಲರಿಗೂ ಸುಭಿಕ್ಷಕರಾಗಿರುತ್ತಾರೆಂದು ಹೇಳುತ್ತಿದ್ದೇನೆ. ಆದ್ದರಿಂದ, ಹಿಂದಿನ ಕೇಂದ್ರಸರ್ಕಾರದಲ್ಲಿ ಶ್ರೀ ದೇವೇಗೌಡರವರು ಇದಕ್ಕೆ ಸಹಾಯಧನ ಕೊಡುತ್ತಿದ್ದರು.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಹಸುವನ್ನು ದೇವರಿಗೆ, ತಾಯಿಗೆ ಹೋಲಿಸುತ್ತಾರೆ. ಅವು ಹಾಲು ಕೊಟ್ಟಾದ ಮೇಲೆ ತೆಗೆದುಕೊಂಡು ಹೋಗಿ ಕಸಾಯಿಖಾನೆಗೆ ಕೊಡುತ್ತಾರೆ. ಅದಕ್ಕೆ ಬದಲಾಗಿ, ಜಿಲ್ಲೆಗಳಿಗೊಂದರಂತೆ ಗೋಶಾಲೆ ಮಾಡಿದರೆ, ಗೊಬ್ಬರವೂ ಬರುತ್ತದೆ. ಬೆಳೆಗೂ ಕೂಡ ಒಳ್ಳೆಯದಾಗುತ್ತದೆ. ವಯಸ್ಸಾದ ಹಸುಗಳಿಗೂ ಕೂಡ ಅದೇ ರೀತಿ ಮಾಡಿದರೆ ಉತ್ತಮವಾಗುತ್ತದೆನ್ನುವ ಸಲಹೆಯನ್ನು ನಾನು ಸರ್ಕಾರದ ಮುಂದಿಡುತ್ತೇನೆ.

ಶ್ರೀ ಎನ್. ರಾಜಣ್ಣ : 1997-98ರಲ್ಲಿ ಶ್ರೀ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ 8350 ಕೋಟಿ ರೂಪಾಯಿಗಳನ್ನು ಈ ದೇಶದ ರೈತರಿಗೆ ರಿಯಾಯಿತಿ ದರದಲ್ಲಿ ಕೊಟ್ಟಿದ್ದಾರೆ. ಇದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಹೇಳುತ್ತಿದ್ದೇನೆ. ಇದನ್ನೆಲ್ಲಾ ಕಂಡು ಸನ್ಮಾನ್ಯ ಶ್ರೀ ಜೆ.ಎಚ್. ಪಟೇಲರು ಮತ್ತು ರೆವಲ್ಯೂಷನರಿ ಮಿನಿಸ್ಟರ್, ಬೈರೇಗೌಡರವರಲ್ಲಿ ನನ್ನ ವಿನಂತಿ ಏನೆಂದರೆ, ಕೊಟ್ಟಿಗೆ ಗೊಬ್ಬರ ಕ್ರಾಂತಿಯಾಗಬೇಕು, ಹ್ಯೂಮನ್ ವೇಸ್ಟ್ ಕ್ರಾಂತಿಯಾಗಬೇಕು, ನ್ಯಾಷನಲ್ ವೇಸ್ಟ್ ಉಪಯೋಗಿಸಬೇಕು, ಭಾರತ ದೇಶದಲ್ಲಿ ಈ ಪ್ರಾಡೆಕ್ಟ್ ಕರ್ನಾಟಕದಿಂದಲೇ ಶುರುವಾಗಬೇಕು. It is a very difficult task. It is not so easy. ಎಲ್ಲರ ಸಹಾಯವಿದ್ದರೆ, ನಮ್ಮ ದೇಶ ಗೋಲ್ಡ್ ಆಗುತ್ತದೆ. Let it start from Karnataka. Sir, it is a very tough job. Discouraging man-made technology.... ಒಂದೇ ಸಲಕ್ಕೆ ನಾವು ಮ್ಯಾನ್ ಮೇಡ್ ಟೆಕ್ನಾಲಜಿಯನ್ನು ಡಿಸ್ಕರೇಜ್ ಮಾಡಬಾರದು, ಸ್ಟೆಪ್ ಬೈ ಸ್ಟೆಪ್ ಡಿಸ್ಕರೇಜ್ ಮಾಡಿ. and encourge the natural technology in all food products. ನಾವು ನ್ಯಾಚುರಲ್ ಟೆಕ್ನಾಲಜಿಯನ್ನು ಗ್ರಾಜುಯಲಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಾರಂಭದಲ್ಲಿ ನಾನು 4 ನಂಬರ್ ಅಂದರೆ 9 ಎಂದು ಹೇಳಿದ್ದೆ. ಆ 9 ಅನ್ನಾಂಗಗಳು ಹಾಲು , ಮೀನು, ತರಕಾರಿ, ಮೊಟ್ಟೆ ಈ 4 ರಲ್ಲಿ ಅಡಗಿದೆ. 9 ಬಹಳ ಮುಖ್ಯವಾದುದು. 9 ಇಂಟು 1 = 9, 9 ಇಂಟು 2 = 18, 1 ಪ್ಲಸ್ 8 = 9, 9 ಇಂಟು 3=27,

2 ಪ್ಲಸ್ 7=9, 9 ಇಂಟು 4=36, 3 ಪ್ಲಸ್ 6=9, ಈ 9 ಬಹಳ ಮುಖ್ಯವಾದುದು. ಕೋಳಿ 21 ದಿನಗಳಿಗೆ ಮರಿ ಹಾಕುತ್ತದೆ, ಹಂದಿ 116 ದಿನಗಳಿಗೆ ಮರಿ ಹಾಕುತ್ತದೆ, ಕುರಿ 165 ದಿನಗಳಿಗೆ ಮರಿ ಹಾಕುತ್ತದೆ, ಮೇಕೆ 180 ದಿನಗಳಿಗೆ ಮರಿ ಹಾಕುತ್ತದೆ ನಾಯಿ 2 ತಿಂಗಳ 2 ದಿನಗಳಿಗೆ ಮರಿ ಹಾಕುತ್ತದೆ , ಕುದುರೆ 11 ತಿಂಗಳ 11 ದಿನಗಳಿಗೆ ಮರಿ ಹಾಕುತ್ತದೆ ಎಮ್ಮೆ 10 ತಿಂಗಳ 10 ದಿನಗಳಿಗೆ ಕರು ಹಾಕುತ್ತದೆ. ಹಸು 9 ತಿಂಗಳ 9 ದಿನಗಳಿಗೆ ಕರು ಹಾಕುತ್ತದೆ. ತಾಯಿ ಮಗುವಿನ ಜನನ ಮಾಡುವುದು 9 ತಿಂಗಳ 9 ದಿನಗಳಿಗೆ. ನೈನ್ ನಂಬರ್ ಈಜ್ ವೆರಿ ಇಂಪಾರ್ಟೆಂಟ್. 9 ಇಂಟು 1=9, 9 ಇಂಟು 2=18, 9 ಇಂಟು 9=81, 8 ಪ್ಲಸ್ 1=9. ಅದಕ್ಕೋಸ್ಕರ, No. 9 is very important. There are two mothers in this world. Only one father. The mother who gave birth to the baby is No. I mother and the second mother is who feeds the baby in the absence of the mother's milk i.e. cow. ಅದಕ್ಕೋಸ್ಕರ ಇದಕ್ಕೆ ಇಷ್ಟೆಲ್ಲಾ ಕೊಟ್ಟು ಹಣವಿಡಬೇಕೆಂದು ಹೇಳುತ್ತೇನೆ. 9 ಅನ್ನಾಂಗಗಳು ಸರಿಯಾಗಿದ್ದರೆ ಪ್ರಾಬ್ಲಂ ಬರುವುದಿಲ್ಲ.

ಅಧ್ಯಕ್ಷರು : ಬಹಳ ಕಾಂಟ್ರೋವರ್ಷಿಯಲ್ ಸಬ್ಜೆಕ್ಟಗೇ ಬಂದಿರಲ್ಲಾ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಜನತಾದಳ ಶಾಸಕರು 109 ಇದ್ದಾರೆ. ಇದನ್ನೂ ನೀವು ಹೇಳಬೇಕು.

ಶ್ರೀ ಎನ್. ರಾಜಣ್ಣ : ನಿಮಗೆ 9 ವಿಟಮಿನ್‌ಗಳು ಕಡಿಮೆಯಾಗಿವೆ. ಅದಕ್ಕೆ ಈ ತರಹ ಮಾತನಾಡುತ್ತಿದ್ದೀರಿ. ವಿಟಮಿನ್ಸ್ ಸರಿಯಾಗಿದ್ದರೆ ಚಿಂತನೆ ಮಾಡಿ ಕರೆಕ್ಟ್ ಆಗಿ ಹೇಳುತ್ತಿದ್ದಿರಿ. ಕೋಪ ಮಾಡಿಕೊಳ್ಳಬೇಡಿ.

ಶ್ರೀಮತಿ ಬಿ.ಟಿ. ಲಲಿತನಾಯಕ್ : ಶ್ರೀ ರಾಜಣ್ಣನವರು ತುಂಬಾ ಒಳ್ಳೆಯ ಮತ್ತು ಗಂಭೀರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದರೂ ಏಕೆ ತಮಾಷೆಯಾಗಿ ಎಲ್ಲರೂ ತೆಗೆದುಕೊಳ್ಳುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಏನು ಮಾಡುವುದು, ನೀವೇ ವಿಶ್ಲೇಷಣೆ ಮಾಡಬೇಕು. ನಾವು ಸಾಮಾನ್ಯ ಜನರು.

ಶ್ರೀ ಎನ್. ರಾಜಣ್ಣ : ನಾನು ಸೀರಿಯಸ್ ಆಗಿ ದುಡಿದು 30 ವರ್ಷಗಳು ಸೈಕಲ್ ಹೊಡೆದು ,ಬ್ರಿಟಿಷ್ , ಮಿಲಿಟರಿ ಅಡ್ಮಿನಿಸ್ಟ್ರೇಷನ್ ಎಲ್ಲಾ ನೋಡಿ ಕೊನೆಯಲ್ಲಿ ಇದನ್ನು ನೋಡಿ , ಫೆನಲ್ ಆಗಿ ರೆಸ್ಪಿಂಗ್ ಪ್ಲೇಸ್‌ಗೆ ಹೋಗೋಣವೆಂದು ಇಲ್ಲಿ ಬಂದಿದ್ದೇನೆ. ಅದಕ್ಕೋಸ್ಕರ ದೇಶ ಚೆನ್ನಾಗಿರಲಿ , ದೇಶಕ್ಕಾಗಿ ನಾನು ಏನು ಮಾಡಿದೆ ಎಂದು ಇಲ್ಲಿ ಭಯಬಿಟ್ಟು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಇಷ್ಟೆಲ್ಲಾ ಮಾಡಿ ಆರ್ಡಿನರಿ ಮ್ಯಾನ್; ಏನೂ ಮಾಡದೆ ಬೈರೇಗೌಡರು ರೆವಲ್ಯೂಷನರಿ.

ಶ್ರೀ ಎನ್. ರಾಜಣ್ಣ : ಅವರ ಖರ್ಚಿ ಮೇಲಾಗಲಿ, ಯಾರ ಖರ್ಚಿ ಮೇಲಾಗಲಿ ನನಗೆ ಕಣ್ಣಿಲ್ಲ.

ಯಾವುದೇ ಪಕ್ಷ ಆಡಳಿತ ನಡೆಸುವ ಸಂದರ್ಭದಲ್ಲಿ ಹಾಲು ಮತ್ತು ತರಕಾರಿ ಬೆಲೆ ಏರಿದರೆ, ಇದಕ್ಕಾಗಿ ರಾಜಕೀಯ ಮಾಡಬಾರದು. For perishable items since British regime, there is no sales tax. This is not a profit making business. It is only a service to the people. ಮಗುವಿನ ಆರೋಗ್ಯ ದೃಷ್ಟಿಯಿಂದ ತಾಯಿಯ ಹಾಲು ಉತ್ತಮ. ಒಂದು ವೇಳೆ ಅದಕ್ಕೂ ಕೊರತೆ ಇದ್ದರೆ, ಹಸುವಿನ ಹಾಲನ್ನೇ ಕೊಡಬೇಕು ಅಥವಾ ಡೇರಿ ಹಾಲನ್ನು ಕೊಡಬಹುದು. ಯಾವುದೇ ಕಾರಣಕ್ಕೂ ಮಕ್ಕಳಿಗೆ ಡಬ್ಬಾ ಹಾಲನ್ನು ಕೊಡಬಾರದೆಂಬುದು ನನ್ನ ಕಳಕಳಿಯ ಮನವಿ. ಇಷ್ಟು ಹೇಳುತ್ತಾ, 9 ಅನ್ನಾಂಗಗಳು ಸರಿಯಾಗಿದ್ದರೆ ಮನುಷ್ಯನಿಗೆ ಅನುಕೂಲ. ಈ ದೇಶದಲ್ಲಾಗುತ್ತಿರುವ ವ್ಯತ್ಯಾಸಕ್ಕೆ ಇದೇ ಕಾರಣ. 9 ವಿಟಮಿನ್‌ಗಳಿದ್ದವನಲ್ಲಿ ಸರ್ವವೂ ಇದೆ. ಶಕ್ತಿ ಸಮೃದ್ಧಿ ಸಂತೃಪ್ತಿ. ಅದಕ್ಕೋಸ್ಕರ, ವಿಟಮಿನ್‌ಗಳು 4 ಡಿಮಾಂಡ್‌ಗಳೇನಿವೆ ಇವುಗಳಿಗೆ ತಾವೆಲ್ಲಾ ಸಹಕಾರ ಕೊಟ್ಟು,ಹಣ ಜಾಸ್ತಿ ಕೊಡಬೇಕೆಂದು ಕೇಳಿಕೊಂಡು, ಇಷ್ಟು ಹೊತ್ತು ನನ್ನ ಮಾತುಗಳನ್ನು ಕೇಳಿದ್ದಕ್ಕೆ ನಾನು ತಮಗೆ ಕೃತಜ್ಞತೆ ಹೇಳುತ್ತೇನೆ ಮತ್ತು ಅಧ್ಯಕ್ಷರು ನನಗೆ ಎರಡನೇ ಬಾರಿ ಆಡಳಿತ ಪಕ್ಷದಲ್ಲಿಟ್ಟುಕೊಂಡು ಅವಕಾಶ ಮಾಡಿಕೊಟ್ಟಿದ್ದಕ್ಕೆ. Iam very greateful to you and the officers and the press. Thank you very much, Sir.

+ ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ನಮ್ಮ ಸರ್ಕಾರದ ಕೃಷಿ, ತೋಟಗಾರಿಕೆ ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಇವು ಬಹಳ ಪ್ರಮುಖವಾದ ಇಲಾಖೆಗಳು. ಬಹುಶಃ ಈ ದೇಶದ ಬೆನ್ನೆಲುಬು ಎಂದು ಹೇಳುವ, ರೈತನ 50 ವರ್ಷಗಳ, ರಾಷ್ಟ್ರದ ಆಡಳಿತದಲ್ಲಿ ಸುವರ್ಣಮಹೋತ್ಸವ ಆಚರಿಸುವ ಕಾಲದಲ್ಲಿ ಇಲ್ಲಿಯವರೆಗೆ ಬಂದ ಕೇಂದ್ರ ಸರ್ಕಾರಗಳೇ ಆಗಲಿ, ರಾಜ್ಯ ಸರ್ಕಾರಗಳೇ ಆಗಲಿ, ರಾಜ್ಯ ಸರ್ಕಾರಗಳೇ ಆಗಲಿ ಈ ಇಲಾಖೆಗಳಿಗೆ ಎಷ್ಟೊಂದು ಮಹತ್ವ ಕೊಟ್ಟು, ಈ ದೇಶದ ಮತ್ತು ರಾಜ್ಯದ ಆರ್ಥಿಕಾಭಿವೃದ್ಧಿ ಮಾಡಬೇಕಿತ್ತೋ ಅಷ್ಟೊಂದು ಮಾಡಿಲ್ಲವೆಂದು ನಾವು ಹೇಳಬೇಕಾಗುತ್ತದೆ. ಈ 50 ವರ್ಷಗಳ ಇತಿಹಾಸದಲ್ಲಿ ಅನೇಕ ಸರ್ಕಾರಗಳು ಬಂದಿವೆ. ರಾಜ್ಯದಲ್ಲೂ, ಕೇಂದ್ರದಲ್ಲೂ ಬಂದಿವೆ. ಆದರೆ, ಈ ದೇಶದ ಬಡಪಾಯಿಯಾದ, ಬಹುಸಂಖ್ಯಾತರಾದ ಗ್ರಾಮೀಣ ಪ್ರದೇಶದಲ್ಲಿರುವ ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ, ಕೃಷಿಕರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ, ಇವರೆಲ್ಲರ ಅಭಿವೃದ್ಧಿ ಮಾಡುತ್ತೇವೆಂದು ಹೇಳಿ, ಈ ದೇಶದ ಬೆನ್ನಲುಬು ಎಂದು ಹೇಳಿ ಅವರ ಅಭಿವೃದ್ಧಿಯನ್ನು ಮಾಡದೆ, ಇವತು ಆಡಳಿತವನ್ನು ಮಾಡಿದ ಸರ್ಕಾರಗಳು ದುರುಪಯೋಗ ಮಾಡಿಕೊಂಡು ಬಂದಿದ್ದನ್ನು ನಾವು ಕಾಣುತ್ತಿದ್ದೇವೆ. ಆ ದೃಷ್ಟಿಯಿಂದ ಇವತ್ತಿಗೂ ಸಹ ರಾಜ್ಯ ಸರ್ಕಾರ ಸರಿಯಾದ ಆದ್ಯತೆಯನ್ನು ಈ ಐದೂ ಇಲಾಖೆಗೆ ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ.

1.10 ಪಿ.ಎಂ

ಭಾರತ ಕೃಷಿ ಪ್ರಧಾನ ರಾಷ್ಟ್ರವೆಂದು ನಾವು ಹೇಳಿಕೊಂಡು ಬರುತ್ತಿದ್ದೇವೆ. ಪೂಜ್ಯ ಮಹಾತ್ಮ ಗಾಂಧೀಜಿಯವರು "ಭಾರತ ಕೃಷಿ ಪ್ರಧಾನ ರಾಷ್ಟ್ರ" ಆಗಬೇಕು ಎಂದೇನು ಕನಸು ಕಟ್ಟಿದ್ದರೋ ಆ ಕನಸು ಸ್ವತಂತ್ರ ಬಂದು ಐವತ್ತು ವರ್ಷಗಳಾದರೂ ಈಡೇರಲಿಲ್ಲ. ಗ್ರಾಮೀಣ ಪ್ರದೇಶಗಳು

ಅಭಿವೃದ್ಧಿಯಾಗಬೇಕು ಎಂದು ಕನಸು ಕಂಡಿದ್ದರೂ ಅದೂ ಕೂಡ ಕನಸು ನನಸಾಗಲಿಲ್ಲ. ಪ್ರತಿಶತ 70 ರಷ್ಟು ಗ್ರಾಮೀಣ ಜನರು ಇವತ್ತು ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವುದರಿಂದ ನಗರಗಳು ಇಂದು ನಾಗಲೋಟದಲ್ಲಿ ಬೆಳೆಯುತ್ತಿವೆ. ಇವರಲ್ಲಿ ಬಹಳಷ್ಟು ಜನ ಕೃಷಿಗೆ ಹಾಗೂ ಕೃಷಿಗೆ ಪೂರಕವಾಗಿರುವ ಉದ್ಯಮದ ಮೇಲೆ ಅವಲಂಬಿತರಾಗಿದ್ದಾರೆ. ಬೇರೆ ಇಲಾಖೆಗಳಿಗೆ ಇಡುವಂತಹ ಹಣದ ಪ್ರಮಾಣದಷ್ಟು, ಈ ಕೃಷಿ ಇಲಾಖೆಗೆ ರಾಜ್ಯಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ, ಹಣವನ್ನು ಕೊಡುತ್ತಿಲ್ಲ. ಬಹಳ ಈ ಕೃಷಿ, ತೋಟಗಾರಿಕೆ, ಪಶುಸಂಗೋಪನಾ, ಮೀನುಗಾರಿಕೆ, ಹಾಗೂ ರೇಷ್ಮೆ ಇಲಾಖೆಗಳಿಗೆ ಕನಿಷ್ಟ ಆದ್ಯತೆಯನ್ನೂ ಇಂದು ಕೊಡುತ್ತಿಲ್ಲ. ಬಹುಶಃ ರಾಷ್ಟ್ರದ ಎಲ್ಲಾ ರಾಜ್ಯಗಳಿಗಿಂತ ಬಹಳ ಸಮೃದ್ಧವಾದ ನಿಸರ್ಗ ಸಂಪನ್ಮೂಲಗಳನ್ನು ಹೊಂದಿದಂಥ ರಾಜ್ಯ ನಮ್ಮ ಕರ್ನಾಟಕ ರಾಜ್ಯ. ನಮ್ಮ ದೇಶದ ಇತರೆ ಯಾವುದೇ ರಾಜ್ಯಗಳು ಈ 5 ಇಲಾಖೆಗಳು ಪಡೆದಂಥ ಸಮೃದ್ಧ ನಿಸರ್ಗ ಸಂಪನ್ಮೂಲಗಳನ್ನು ಪಡೆದಿಲ್ಲ. ಈ ಮಾತನ್ನು ನಾವು ಬಹಳ ಮೆಚ್ಚುಗೆಯಿಂದ ಹೇಳಬೇಕಾಗುತ್ತದೆ. ನಮ್ಮ ರಾಜ್ಯ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇ ಆದರೆ ಕೇಂದ್ರಸರ್ಕಾರದ ಯಾವ ಸಹಾಯವನ್ನೂ ನಾವು ಬೇಡದೆ, ಇವತ್ತು ನಮ್ಮ ರಾಜ್ಯವನ್ನು ಆರ್ಥಿಕವಾಗಿ ಸಬಲವಾಗಿ ಬೆಳೆಸುವುದಕ್ಕೆ. ಸಾಧ್ಯವಿದೆ. ನಿಸರ್ಗ ನಮಗೆ ಕೊಟ್ಟಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಮೂಲಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶ ಈ ಐದು ಇಲಾಖೆಗಳಿಗೆ ಇದೆ. ಬಹುಶಃ ನಾವಿಂದು ಕಾಣುತ್ತಿರುವ ನಿರುದ್ಯೋಗಿಗಳ ಸಂಖ್ಯೆಯನ್ನು ಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಹಾಗೂ ನಿರುದ್ಯೋಗಿಗಳಿಲ್ಲದ ರಾಜ್ಯವನ್ನು ಮಾಡುವುದಕ್ಕೆ ಕರ್ನಾಟಕ ರಾಜ್ಯದಲ್ಲಿರುವಷ್ಟು ಅವಕಾಶಗಳು ಬೇರೆ ಯಾವುದೇ ರಾಜ್ಯಗಳಲ್ಲೂ ಇಲ್ಲವೆಂದು ನಾವು ಇಲ್ಲಿ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಇವತ್ತು ಈ ಇಲಾಖೆಗಳಿಗೆ ರಾಜ್ಯ ಸರ್ಕಾರ ಸಾಕಷ್ಟು ಹಣಕಾಸಿನ ನೆರವನ್ನು ಒದಗಿಸಿಕೊಡಬೇಕು. ನಾವೆಲ್ಲರೂ ನಮ್ಮ ದೇಶದ ಬೆನ್ನೆಲುಬು ರೈತ ಎಂದು ಹೇಳಿಕೊಂಡು ಬಂದಿದ್ದೇವೆ. ಆದರೆ ಇವತ್ತು ಆ ರೈತ ತನ್ನ ಮನೆ-ಮಠ-ಆಸ್ತಿ-ಪಾಸ್ತಿಗಳನ್ನು ಮಾರಿಕೊಂಡು ಶಹರಕ್ಕೆ ವಲಸೆ ಬರುತ್ತಿದ್ದಾನೆ. ಇಂತಹ ಒಂದು ಪರಿಸ್ಥಿತಿಯನ್ನು ರಾಜ್ಯಸರ್ಕಾರ, ಕೇಂದ್ರ ಸರ್ಕಾರ ತಂದಿದೆ ಎಂದರೆ ಅತಿಶಯೋಕ್ತಿಯಲ್ಲ. ಇವತ್ತು ರೈತ ಯಾವುದಾದರೂ ಸರಿ ಕನಿಷ್ಟ ಸರ್ಕಾರಿ ನೌಕರಿಯಲ್ಲಿ ಪಿವನ್ ಆದರೂ ಸಾಕು, ನೌಕರಿ ಸೇರಬೇಕು ಎನ್ನುವ ಮಟ್ಟಕ್ಕೆ ಹೋಗಿದ್ದಾನೆ. ಇವತ್ತು ಐವತ್ತು ಎಕರೆ ಜಮೀನು ಇದ್ದರೂ, ಒಬ್ಬ ಒಳ್ಳೆಯ ರೈತ ತನ್ನ ಕುಟುಂಬವನ್ನು ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಇಂತಹ ಒಂದು ಪರಿಸ್ಥಿತಿ ರಾಜ್ಯದಲ್ಲೂ ರಾಷ್ಟ್ರದಲ್ಲಿ ಕಂಡು ಬರುತ್ತಿದೆ. ಇಲ್ಲಿಯವರೆಗೆ ಎಂಟು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿದ್ದಾರೆ. ಈ ಎಂಟು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ 9ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಿದೆ. ಸ್ವತಂತ್ರ ಬಂದು ಐವತ್ತು ವರ್ಷಗಳಾದ ನಂತರ ಏನಾದರೂ ಕೇಂದ್ರಸರ್ಕಾರ, ಹಾಗೂ ಈಗಿರುವಂಥ ಸರ್ಕಾರ ಈ ಗ್ರಾಮೀಣಾಭಿವೃದ್ಧಿಗೆ, ಹಾಗೂ ದೇಶದ ಬೆನ್ನೆಲುಬು ಆಗಿರುವ ರೈತರ ಬಗ್ಗೆ, ಹಾಗೂ ಕೃಷಿ ಇಲಾಖೆ, ತೋಟಗಾಗಿಕೆ ಇಲಾಖೆ , ಪಶುಸಂಗೋಪನಾ ಇಲಾಖೆ, ಮೀನುಗಾರಿಕೆ ಇಲಾಖೆ, ಹಾಗಾ ರೇಷ್ಮೆ ಇಲಾಖೆ, ಈ 5 ಇಲಾಖೆಗಳ ಮೂಲಕ, ನಮ್ಮ ರಾಜ್ಯ, ರಾಷ್ಟ್ರ, ಆರ್ಥಿಕವಾಗಿ ಅಭಿವೃದ್ಧಿ ಮಾಡುವುದಕ್ಕೆ ಸರಿಯಾದ ಯೋಜನೆಗಳನ್ನು

ತರಬಹುದೆಂದು ನಾನು ಭಾವಿಸುತ್ತೇನೆ. ಮಾನ್ಯ ಭೈರೇಗೌಡರಂಥವರು ಬಹಳ ಪ್ರಮುಖವಾಗಿ ಇನ್ನೂ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಇನ್ನೂ ಹೆಚ್ಚಿನ ಹಣಕಾಸಿನ ಸೌಲಭ್ಯವನ್ನು ಒದಗಿಸಿಕೊಡಬೇಕು. ಇವತ್ತು ನಮ್ಮ ರಾಜ್ಯದಲ್ಲಿ ರೈತರು ವಿಷ ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂದೊದಗಿದೆ. ಬಹುಶಃ ಯಾವುದೇ ಇತಿಹಾಸದಲ್ಲಿ ಕಾಣದಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇಂದು ನಾವು ಕಾಣುತ್ತಿದ್ದೇವೆ. ಇದನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಬರುವುದಕ್ಕೆ ಸರ್ಕಾರವೇ ಕಾರಣ ಅಥವಾ ಸರ್ಕಾರದ ಯೋಜನೆಗಳೇ ಕಾರಣ ಅಥವಾ ಈ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡದಿರುವುದೇ ಕಾರಣವೆಂದು ನಾನು ಹೇಳಬೇಕಾಗುತ್ತದೆ. ನಾವು ಇವತ್ತು ಕೇಂದ್ರದ ಆಡಳಿತವನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಕಾಲದಲ್ಲಿ ಮಾತ್ರ, ಈ ದೇಶವನ್ನು ಸಂರಕ್ಷಣೆ ಮಾಡುವಂತಹ ಜೈ ಜವಾನರ ಬಗ್ಗೆ, ಎಲ್ಲಾ ಜನತೆಯನ್ನು ಸಂರಕ್ಷಣೆ ಮಾಡತಕ್ಕಂಥ, ಹಾಗೂ ಶಕ್ತಿಯನ್ನು ಕೊಡತಕ್ಕಂಥ ರೈತರ ಬಗ್ಗೆ "ಜೈ - ಜವಾನ್, ಜೈ - ಕಿಸಾನ್" ಎಂಬ ಘೋಷಣೆ ಮಾಡಿ, ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು 1965 ರಲ್ಲಿ ಸ್ವಲ್ಪ ಒತ್ತು ಕೊಡುವುದಕ್ಕೆ ಪ್ರಾರಂಭಿಸಿದರು. ಆದರೆ ಅವರ ಮುಂದೆ ಬಂದಂಥ ಸರ್ಕಾರಗಳು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಲಿಲ್ಲ. ಈ ವಿಚಾರವನ್ನು ನಾವಿಂದು ಗಮನಿಸಬೇಕಾಗಿದೆ. ಇದಕ್ಕೆ ಪುನ: ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಕಾಲ ಇಂದು ನಮಗೆ ಬಂದೊದಗಿದೆ. ಹಾಗೂ ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನಾವಿಂದು ಕೊಡಬೇಕಾಗಿದೆ. ಪ್ರಪಂಚದ ಎಲ್ಲಾ ರಾಷ್ಟ್ರಗಳನ್ನು ನಾವು ನೋಡುವುದಾದರೆ ಜಗತ್ತಿನ ಯಾವ ರಾಷ್ಟ್ರ ಪಡೆಯದಂಥ ನಿಸರ್ಗ ಸಂಪನ್ಮೂಲಗಳನ್ನು ನಮ್ಮ ಭಾರತ ದೇಶ ಪಡೆದಿದೆ. ಜಗತ್ತಿನಲ್ಲಿ ಇವತ್ತು ಬಹಳ ಚಿಕ್ಕ ಚಿಕ್ಕ ರಾಷ್ಟ್ರಗಳು, ಪಶುಸಂಗೋಪನೆ, ಕೃಷಿ ತೋಟಗಾರಿಕೆಯಲ್ಲಿ ಮುಂದುವರಿದಿವೆ. ಉದಾಹರಣೆಗೆ ಹೇಳುವುದಾದರೆ, ಇಸ್ರೇಲಿ, ಡೆನ್ಮಾರ್ಕ್‌ನಂಥ ರಾಷ್ಟ್ರಗಳು ಅಲ್ಲಿರುವಂತಹ ರೈತರನ್ನು ಸಮೃದ್ಧವಾಗಿ ಬೆಳೆಸುವುದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಮುಂದುವರಿದಿವೆ. ಬಹುಶಃ ಇಡೀ ಜಗತ್ತಿಗೆ ಆರ್ಥಿಕವಾಗಿ ಸಬಲವಾದಂತಹ ಒಂದು ಪರಿಸ್ಥಿತಿಯನ್ನು ಇವತ್ತು ತಂದು ಕೊಟ್ಟಿವೆ. ತಮ್ಮ ದೇಶಕಲ್ಲದೆ ಇಡೀ ಜಗತ್ತಿಗೆ ತಮ್ಮ ಉತ್ಪಾದನೆಯನ್ನು ಇವತ್ತು ರಫ್ತು ಮಾಡುತ್ತಿದ್ದಾರೆ. ನಮ್ಮಲ್ಲಿ ಇವಕ್ಕೆಲ್ಲಾ ಅವಕಾಶವಿದ್ದರೂ ಕೂಡ ಸರ್ಕಾರ ಹೆಚ್ಚಿನ ಒತ್ತನ್ನು ಕೊಡಲಿಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ಭಾರತದಲ್ಲಿ ಕರ್ನಾಟಕ ರಾಜ್ಯದ ನಿಸರ್ಗ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು ಕೃಷಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಬಗ್ಗೆ ನಾವಿಂದು ಗಮನಹರಿಸಬೇಕಾಗಿದೆ. ನಮ್ಮಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಇವು ಬಹಳ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಈಗಿರುವ ನಿಸರ್ಗ ಸಂಪನ್ಮೂಲಗಳಲ್ಲಿ ಬಹಳ ಉತಷ್ಟವಾದ ಮಣ್ಣು ನಮ್ಮ ರಾಜ್ಯದಲ್ಲಿದೆ. ಎಲ್ಲಾ ವಿಧವಾದ ಮಣ್ಣುಗಳು ನಮ್ಮ ರಾಜ್ಯದಲ್ಲಿ ದೊರಕುತ್ತವೆ. ಭಾರತ ದೇಶದ ಯಾವುದೇ ರಾಜ್ಯದಲ್ಲಿ ಕಾಣದಂಥ ಎಲ್ಲಾ ಪ್ರಕಾರದ, ಎಲ್ಲಾ ಗುಣಧರ್ಮಗಳನ್ನು ಉಳ್ಳಂತಹ ಮಣ್ಣನ್ನು ನಮ್ಮ ರಾಜ್ಯದಲ್ಲಿ ನಾವು ಕಾಣುತ್ತೇವೆ. ಆದರಂತೆ ಎಲ್ಲಾ ಪ್ರಕಾರದ ಲಾಭದಾಯಕ ಎಂದು ಹೇಳುವುದಕ್ಕಿಂತ ಹಣಕಾಸಿನ ಬೆಳೆಗಳನ್ನು ಬೆಳೆಯುವುದಕ್ಕೆ ಇಲ್ಲಿ ಅವಕಾಶವಿದೆ. ದ್ವಿದಳ ಧಾನ್ಯಗಳನ್ನು, ಆಹಾರ ಧಾನ್ಯಗಳನ್ನು

ಎಣ್ಣೆ ಕಾಳುಗಳನ್ನು, ಮಸಾಲೆ ಪದಾರ್ಥಗಳನ್ನು, ಹಣ್ಣು ಹಂಪಲುಗಳನ್ನು, ತರಕಾರಿಗಳನ್ನು, ಹೀಗೆ ಎಲ್ಲ ರೀತಿಯಲ್ಲಿ ಹಣಕಾಸಿನ ಬೆಳೆಗಳನ್ನು ಬೆಳೆಯುವುದಕ್ಕೆ ಇಲ್ಲಿ ಅವಕಾಶವಿದೆ. ನಮ್ಮ ಎರಡು ಕೃಷಿ ವಿಶ್ವವಿದ್ಯಾಲಯಗಳಿಗೆ ಎಷ್ಟೊಂದು ಹಣಕಾಸಿನ ಸೌಲಭ್ಯವನ್ನು ನಮ್ಮ ಸರ್ಕಾರ ಒದಗಿಸಿಕೊಡಬೇಕಾಗಿತ್ತೋ ಅಷ್ಟು ಹಣಕಾಸಿನ ಸೌಲಭ್ಯವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತಾ ಇಲ್ಲ. ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು, ಸಂಶೋಧನೆಗಳು ಹೆಚ್ಚು ಬೆಳವಣಿಗೆಯಾಗಬೇಕು, ಹೊಸ ಹೊಸ ತಳಿಗಳನ್ನು ತರಬೇಕಾಗಿದೆ, ಹಾಗೂ ಈಗ ಕಾಡುತ್ತಿರುವ ರೋಗರುಜಿನಗಳನ್ನು ಕಂಡು ಹಿಡಿಯಬಹುದಾಗಿದೆ. ಏಕೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ರೈತ ವಿಷ ಸೇವಿಸಿ ಸಾಯುವಂತಹ ಪರಿಸ್ಥಿತಿ ಬಂದಿದ್ದು ಈ ಕೀಟಗಳಿಂದ. ಈ ಕೀಟಗಳ ಹಾವಳಿಯಿಂದ, ರೋಗರುಜಿನಗಳ ಹಾವಳಿಯಿಂದ, ಇಂದು ರೈತ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾನೆ. ಇದಕ್ಕೂ ಕೂಡ ಸರ್ಕಾರ ವಿಶ್ವವಿದ್ಯಾನಿಲಯ ಗಳ ಮೂಲಕ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆ. ಈ ದಿಸೆಯಲ್ಲೂ ಕೂಡ ಸರ್ಕಾರ ವಿಫಲವಾಗಿದೆ. ಇವತ್ತು ಕೃಷಿ ವಿಶ್ವವಿದ್ಯಾನಿಲಯಗಳು, ಕೇವಲ ಪಾಠವನ್ನು, ಶಿಕ್ಷಣವನ್ನು ನೀಡುವಂತಹ ವಿಶ್ವವಿದ್ಯಾನಿಲಯ ಗಳಾಗಿವೆಯೇ ಹೊರತು, ನಿಜವಾದ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಈ ಕೃಷಿ ವಿಶ್ವ ವಿದ್ಯಾನಿಲಯಗಳು ಕೇವಲ ಅಭ್ಯರ್ಥಿಗಳನ್ನು ಸೃಷ್ಟಿಸಿ, ಅವರಿಗೆ ಶಿಕ್ಷಣ ಕೊಟ್ಟು, ಪದವೀಧರರನ್ನಾಗಿ ಮಾಡಿ, ಅವರನ್ನು, ನಿರುದ್ಯೋಗಿಗಳಾಗಿ ಅಲೆಯುವಂತಹ ಒಂದು ವಾತಾವರಣವನ್ನು ಸೃಷ್ಟಿ ಮಾಡುತ್ತಿವೆಯೇ ಹೊರತು ಅವರು ನೇರವಾಗಿ, ಯಾವುದಾದರೂ ಒಂದು ಸ್ವತಂತ್ರವಾಗಿ, ತಮ್ಮ ಕಾಲ ಮೇಲೆ ತಾವು ನಿಂತು ಅವರ ಭವಿಷ್ಯವನ್ನು ರೂಪಿಸಿಕೊಳ್ಳುವಂತಹ ಕೃಷಿ ವಿಜ್ಞಾನದಲ್ಲಿ ಪರಿಣಿತಿಯನ್ನು ಪಡೆದವರಿಗೆ ನಾವು ಅವಕಾಶವನ್ನು ಇಂದು ರೂಪಿಸುತ್ತಿಲ್ಲ. ಇವತ್ತು ಅವರಿಗೆ ಹೆಚ್ಚು ಪ್ರಾಕ್ಟಿಕಲ್ ಆಗಿರತಕ್ಕಂಥ ಒಂದು ಶಿಕ್ಷಣವನ್ನು ಕೊಡಬೇಕಾಗಿದೆ. ನಾವು ಭೌತಿಕವಾದ ಶಿಕ್ಷಣವನ್ನು ಕೊಟ್ಟರೆ ಇವತ್ತು ಸಾಕಾಗುವುದಿಲ್ಲ. ಇವತ್ತು ಅವರಿಗೆ ಪ್ರಾಕ್ಟಿಕಲ್ ಆಗಿ, ಹೊಸ ಯಂತ್ರೋಪಕರಣಗಳು ಇವತ್ತು ಕೃಷಿಯಲ್ಲಿ ಮಾಡಬೇಕು. ಇದನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಅವರಿಗೆ ಭೌತಿಕವಾಗಿ ಇಂಥ ಕ್ರಮ ಬೆಳೆಸಬೇಕು. ಕ್ರಿಯಾತ್ಮಕವಾಗಿ ತೊಡಕು ಬರುವಂಥ ಅನೇಕ ಶಿಕ್ಷಣದ ತೊಡಕುಗಳನ್ನು ಪ್ರಾಕ್ಟಿಕಲ್ ಆಗಿ ಬದಲಾವಣೆ ಮಾಡಬೇಕಾಗಿದೆ. ಬಹುಶಃ ಕೇಂದ್ರದಲ್ಲಿರುವ ಎಲ್ಲಾ ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ. ಅವರಿಗೆ 6 ತಿಂಗಳ ಕೃಷಿ ವಿಜ್ಞಾನದಲ್ಲಿ ಪಠ್ಯಕ್ರಮ ಕೊಡಬೇಕು. ಅವರಿಗೆ ಕೃಷಿ ವಿಜ್ಞಾನದಲ್ಲಿ ಕೃಷಿ ಸಂಶೋಧನೆಯಲ್ಲಿ ಒಂದು ವರ್ಷದವರೆಗೆ ಪ್ರಾಕ್ಟಿಕಲ್ ಕೊಡಬೇಕು. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ವಿದ್ಯಾರ್ಥಿಗಳು ಇದ್ದರೆ, ತೋಟಗಾರಿಕೆ ಇಲಾಖೆಯ ಸಂಶೋಧನೆಯಲ್ಲಿ ಅವರಿಗೆ ಬೆಳವಣಿಗೆ ಮಾಡಬೇಕು. ಪಶುಸಂಗೋಪನೆಯಲ್ಲಿ ವಿದ್ಯಾರ್ಥಿಗಳು ಇದ್ದರೆ, ಅವರಿಗೆ ಕೆಲಸವನ್ನು ಕೊಟ್ಟು ಪ್ರಾಕ್ಟಿಕಲ್ ಆಗಿ ಬದಲಾವಣೆಯ ಶಿಕ್ಷಣ ಅವರಿಗೆ ಕೊಡಬೇಕಾಗಿದೆ. ಅವರಿಗೆ ಬದುಕಲು ನೇರವಾಗಿ ಹಣಕಾಸಿನ ಸಹಾಯವನ್ನು ಮಾಡಿ ಅವರು ಸ್ವಾವಲಂಭಿಯಾಗಿ ತಮ್ಮ ಗ್ರಾಮಗಳಿಗೆ ಹೋಗಿ ಅಭಿವೃದ್ಧಿ ಮಾಡುವಂತಹ ಅವಕಾಶವನ್ನು ಮಾಡಿಕೊಡುವುದಕ್ಕೆ ಒತ್ತು ಕೊಡಬೇಕಾಗಿದೆ. ಈ ದಿಶೆಯಲ್ಲಿ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಒಂದು ರಾಜ್ಯದಲ್ಲಿ ಮೊಟ್ಟ ಮೊದಲನೆಯದಾಗಿ ನಾನು ಹೇಳತಕ್ಕಂಥದ್ದು ಕೃಷಿಗೆ. ಕೃಷಿ ಏನು ಇದೆ,

ಹಳ್ಳಿಗಾಡಿನಲ್ಲಿ ನಮ್ಮ ಬದುಕು ಕೂಡಿದ್ದು, ಸಾಧಾರಣ 6 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಕೂಡಿದ 7 ಗ್ರಾಮ ಪಂಚಾಯಿತಿಗಳು ಇವೆ. ಪ್ರತಿ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಒಂದೊಂದು ಕೃಷಿ ವಿಶ್ವವಿದ್ಯಾನಿಲಯಗಳ ಫಾರಂ ಕೊಡಬೇಕು. ಇದಕ್ಕೆ ನನ್ನ ಒತ್ತಾಯ ಕೂಡ ಇದೆ. ಕೃಷಿ ಇಲಾಖೆಯಲ್ಲಿರತಕ್ಕಂಥ ಫಾರಂಗಳು ಏನು ಇವೆ, ಅದರಿಂದ ಜನರಿಗೆ ಲಾಭದಾಯಕವಾದ ಬೆಳವಣಿಗೆ ಕಾಣುತ್ತಾ ಇಲ್ಲ. ಅದರ ಪ್ರಯೋಜನ ಜನರಿಗೆ ಆಗುತಿಲ್ಲ. ಅದನ್ನು ಕೃಷಿ ಇಲಾಖೆಯಿಂದ ಕೃಷಿ ವಿಶ್ವವಿದ್ಯಾಲನಿಲಯಗಳಿಗೆ ಶಿಕ್ಷಣ ಕೊಡಬೇಕು. ಅದು ಬೀಜೋತ್ಪಾದನೆ ಆಗಬಹುದು, ಸಂಶೋಧನೆ ಆಗಬಹುದು ಯಾವುದೇ ಆದ್ದರು ಸಹಿತ ಅದನ್ನು ಕೃಷಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಕೊಟ್ಟರೆ ಹೆಚ್ಚು ಪ್ರಯೋಜನವಾಗುತ್ತದೆ. ಯಾವ ಯಾವ ಭೂಪ್ರದೇಶದಕ್ಕೆ ಹವಾಗುಣಕ್ಕೆ ಹೊಂದಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ ಅಲ್ಲಿ ಪ್ರಾತ್ಯಕ್ಷಿಕವಾಗಿ ಮಾಡಬೇಕಾಗಿದೆ. ಆ ಪ್ರಾತ್ಯಕ್ಷಿಕ ಕ್ಷೇತ್ರದಲ್ಲಿ ಪರಿಣಿತರ ರಿಸಲ್ಟ್ ಏನು ಇದೆ ನೇರವಾಗಿ ಪ್ರತಿಯೊಬ್ಬ ರೈತರಿಗೆ ಮುಟ್ಟುವಂಥ ಸ್ಥಿತಿಯಲ್ಲಿ ಆ ಪ್ರತ್ಯಾಕ್ಷಿಕೆಗಳು ನಡೆಯಬೇಕು. ನಮ್ಮ ಕೃಷಿ ವಿಶ್ವವಿದ್ಯಾನಿಲಯವಾಗಲಿ ಅಥವಾ ಕೃಷಿ ಇಲಾಖೆಯಾಗಲಿ ಇವತ್ತು ರೈತ ಏನು ಪ್ರಯೋಗಗಳನ್ನು ಮಾಡುತ್ತಿದ್ದಾನೆ ತನ್ನ ಒಂದು ಕುಶಲ ಭೂಮಿಯಲ್ಲಿ ಒಂದೊಂದು ಪ್ರಯೋಗಗಳು ಯಶಸ್ವಿ ಆಗುತ್ತಿವೆ. ಹೊರತಾಗಿ ನಮ್ಮ ಕೃಷಿ ಇಲಾಖೆಯ ಸಹಕಾರದಿಂದ ಯಶಸ್ವಿಯಾಗುತ್ತಿವೆ. ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ವಿಸ್ತರಣಾ ಕಾರ್ಯವನ್ನು ಮಾಡಬೇಕಾಗಿದೆ. ಕೃಷಿ ಇಲಾಖೆ ಆ ಗುಣಮಟ್ಟದಲ್ಲಿ ಕೃಷಿ ವಿಸ್ತರಣಾ ಇಲಾಖೆ ಇವತ್ತು ಅದನ್ನು ಪಡೆದುಕೊಂಡಿಲ್ಲ. ಕೇವಲ ಸರ್ಕಾರದ ಸಬ್ಸಿಡಿ ಅಥವಾ ಸಣ್ಣ ಪ್ರಮಾಣದ ರೈತರಿಗೆ ಸಹಾಯ ಮಾಡುವಂಥ ಉಪಕರಣಗಳ ಪರಿಸ್ಥಿತಿಯನ್ನು ಕೊಡಲಿಕ್ಕೆ ಇಲಾಖೆಗಳು ಇವೆ. ಹೊರತಾಗಿ ಅವರಿಗೆ ತಾಂತ್ರಿಕ ಪರಿಣತಿಯನ್ನು, ರೈತರಿಗೆ ಒಂದು ಪ್ರಮುಖವಾದ ಸೇವೆಯನ್ನು ಈ ವಿಸ್ತರಣಾ ಇಲಾಖೆ, ಕೃಷಿ ಇಲಾಖೆ ಮಾಡಬೇಕಾಗಿದೆ. ಆ ಕಾರ್ಯವನ್ನು ಇವತ್ತು ಪರಿಣಾಮಕಾರಿಯಾಗಿ ಮಾಡುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಇನ್ನು ಕೆಲವು ಸಿಬ್ಬಂದಿಗಳನ್ನು ಕೊಡಿ. ವಿಸ್ತರಣಾ ಇಲಾಖೆ, ಕೃಷಿ ಇಲಾಖೆಗೆ ಸಾಕಷ್ಟು ಆದ್ಯತೆಯನ್ನು ಕೊಡಿ. ಹುದ್ದೆಗಳು ಖಾಲಿ ಇವೆ ಭರ್ತಿ ಮಾಡಿ ಕೃಷಿ ಇಲಾಖೆಯಿಂದ ಒಳ್ಳೆಯ ಮಾಹಿತಿಯನ್ನು ಕೊಡಿ. ಅವರಿಗೆ ನೇರವಾಗಿ ಪ್ರತಿ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಅಥವಾ ಅವರ ವ್ಯಾಪ್ತಿಗೆ ಬರುವ ಕ್ಷೇತ್ರದಲ್ಲಿ ಇರುವಂಥ ವ್ಯವಸ್ಥೆಯನ್ನು ಮಾಡಿ. ಯಾರು ಶಹರದಲ್ಲಿ ಇದ್ದು ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಾರೆ, ಅವರ ಹಳ್ಳಿಗಳನ್ನು ಕಾಣುತ್ತಾರೆ. ಹಳ್ಳಿಯ ಜನರಿಗೆ ಮಾಹಿತಿಯನ್ನು ಒದಗಿಸುತ್ತಾರೆ, ವಿಸ್ತರಣಾ ಕಾರ್ಯವನ್ನು ಸರಿಯಾಗಿ ಮಾಡುತ್ತಾರೆ. ಆ ವ್ಯವಸ್ಥೆಯನ್ನು ನಾವು ಇವತ್ತು ಕಾಣುತ್ತಿಲ್ಲ. ಎಷ್ಟು ಬೆಳೆಯ ಬಗ್ಗೆ ನಿಖರವಾಗಿ ಇವತ್ತು ರೈತನಿಗೆ ಗೊತ್ತಿದೆ. ಇವತ್ತು ಬೆಳೆಯ ಬಗ್ಗೆ ಮಾಹಿತಿ ಕೃಷಿ ಇಲಾಖೆಯಲ್ಲಿ ಇಲ್ಲ. ನಿಖರವಾಗಿ ರೈತ ಎಷ್ಟು ಬೆಳೆ ಬೆಳೆದಿದ್ದಾನೆ. ಹತ್ತಿ ಬೆಳೆಯ ಬಗ್ಗೆ ನಿಖರವಾಗಿ ಇದೆಯೇ? ನೀರಾವರಿ ಪ್ರದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಹತ್ತಿಯನ್ನು ಬೆಳೆಯುತ್ತಾನೆ. ಒಣ ಭೂಮಿಯಲ್ಲಿ ಎಷ್ಟು ಹತ್ತಿಯನ್ನು ಬೆಳೆಯುತ್ತಾನೆ. ಇದರ ಮಾಹಿತಿ, ಸರಿಯಾದಂಥ ಅಂಕಿಅಂಶಗಳು ನಮಗೆ ಸಿಗುತ್ತಿಲ್ಲ. ಏಕೆಂದರೆ ಇಲಾಖೆಯ ಅಧಿಕಾರಿಗಳು ಯಾರು ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಉಳಿದುಕೊಂಡಿಲ್ಲ ಮತ್ತು ಸರಿಯಾದ ಮಾಹಿತಿಯನ್ನು ಅವರು

ತರುತ್ತಿಲ್ಲ. ನಾವು ವಿಚಾರ ಮಾಡಿದರೆ, ಮೊನ್ನೆ ಬೆಳೆ ನಾಶವಾದ ಕಾರಣ ರೈತ ವಿಷವನ್ನು ತೆಗೆದುಕೊಂಡ ಪರಿಸ್ಥಿತಿ ನೋಡಿದಾಗ ಕಂದಾಯ ಇಲಾಖೆಯ ಒಂದು ಅಭಿಪ್ರಾಯ ಇದೆ. ಬರಗಾಲದ ಬಗ್ಗೆ ಬೆಳೆ ಹಾನಿಯ ಬಗ್ಗೆ ಕೃಷಿ ಇಲಾಖೆಯಲ್ಲಿ ಒಂದು ಅಭಿಪ್ರಾಯ ಬೇರೆ ಇದೆ. ಅಂದರೆ, ಇವತ್ತು ನಮ್ಮ ಕಣ್ಣಿಗೆ ಕಾಣುತ್ತಿರುವ ರೈತನನ್ನು ನಾವು ಇವತ್ತು ಯಾವ ಸ್ಥಿತಿಗೆ ತರುತ್ತಿದ್ದೇವೆ. ಯಾವ ಇಲಾಖೆ ರೈತನಿಗೆ ಸಹಾಯ ಮಾಡಬೇಕು. ರೈತ ನಿಜವಾಗಿ ನಮ್ಮನ್ನು ಸಂರಕ್ಷಣೆ ಮಾಡುತ್ತಿದ್ದಾನೆ ರೈತ ಈ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. 224 ಶಾಸಕರೆಲ್ಲಾ ನಾವು ಬಹುತೇಕವಾಗಿ ಗ್ರಾಮಾಂತರ ಪ್ರದೇಶಗಳಿಂದ ಬಂದಿದ್ದೇವೆ. ನಾವು ರೈತ ಕುಟುಂಬದಿಂದ ಬಂದಿದ್ದೇವೆ. ಕೃಷಿ ಕುಟುಂಬದಿಂದ ಸದಸ್ಯರು ಬಂದು ಶ್ರಮ ಹಾಕಿ ಉತ್ಪಾದನೆ ಮಾಡುತ್ತಿದ್ದಾರೆ. ನಾವು ಅವರಿಗೆ ಯಾವರೀತಿಯ ಯೋಜನೆಗಳನ್ನು ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲ. ಆ ದಿಶೆಯಲ್ಲಿ ಕಳಕಳಿ ಇಲ್ಲವೆಂದು ನಮಗೆ ಕಂಡು ಬರುತ್ತದೆ. ಎಲ್ಲರೂ ಪಟ್ಟಣದಲ್ಲಿ ಇರಬೇಕೆಂದು ಇರುತ್ತಾರೆ. ಯಾರು ಹಳ್ಳಿಗೆ ಹೋಗಿ ಜನರ ಸೇವೆ ಮಾಡಬೇಕು? ರೈತ ಈ ದೇಶದ ಬೆನ್ನೆಲುಬು ಅವರು ಆರ್ಥಿಕವಾಗಿ ಪ್ರಭಲರಾಗಿದ್ದಾರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹೆಚ್ಚಾಗುತ್ತದೆ. ರಾಜ್ಯದ ಬಲ ಹೆಚ್ಚಾಗುತ್ತದೆ. ನಾವು ಎಲ್ಲರೂ ಸಂತೋಷವಾಗಿ ಇರಬಹುದು ಎನ್ನುವ ಕಡೆಗೆ ನಮ್ಮ ಯೋಚನೆ,ಕಳಕಳಿ ಇಲ್ಲ ಎನ್ನುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಜನರು ಇವತ್ತು ಶಹರದಲ್ಲಿ ಉದ್ಯೋಗವನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಶಹರದಲ್ಲಿ ಇವತ್ತು ಪರಿಸರ ಹಾಳಾಗುತ್ತಿದೆ. ಇವತ್ತು ಬಹುತೇಕ ಜನರು ಹಳ್ಳಿಗಳನ್ನು ಬಿಟ್ಟು ಶಹರಕ್ಕೆ ಬರುತ್ತಿದ್ದಾರೆ. ಇವತ್ತು ಪಟ್ಟಣದಲ್ಲಿ ಪರಿಸರ ಅಷ್ಟೇ ಹಾಳಾಗುತ್ತಿಲ್ಲ. ಅವರಿಗೆ ಮೂಲಭೂತವಾದ ಸೌಲಭ್ಯಗಳನ್ನು ಇವತ್ತು ನೀಡುವುದಕ್ಕೆ ಸಾಧ್ಯವಿಲ್ಲ. ಇಂತಹ ಒಂದು ದುಃಸ್ಥಿತಿ ಇವತ್ತು ಬಂದಿದೆ. ನೀವು ಇದರ ಕಡೆ ಗಮನ ಕೊಡಬೇಕಾಗಿದೆ. ಇವತ್ತು ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುವುದನ್ನು ತಪ್ಪಿಸಬೇಕಾದರೆ ಇಲ್ಲಿರುವಂಥ ಜನರಿಗೆ ಸರಿಯಾದ ಸೌಲಭ್ಯಗಳು ದೊರಕಬೇಕಾದರೆ ಮುಂದಾದರು ಸಹಿತ ಈ ಪರಿಸರವನ್ನು ನಾವು ಸರಿಯಾಗಿ ಕಾಪಾಡಬೇಕಾದರೆ. ಈ ಇಲಾಖೆಗಳು ಏನು ಇವೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನೆ ಇಲಾಖೆ, ಮತ್ತು ಮೀನುಗಾರಿಕೆ, ರೇಷ್ಮೆ ಇಲಾಖೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಜನರು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಿಗೆ ಹೋಗುವಂತಹ ಪ್ರಯತ್ನ ಮಾಡಬೇಕಾದ ಅಗತ್ಯ ಇದೆ. ಇವತ್ತು ಸರಿಯಾದ ಪರಿಸರವನ್ನು ಕಾಯುವಂಥ ಜವಾಬ್ದಾರಿ ಕೂಡ ಇದೆ. ಇವತ್ತು ನೀರಾವರಿ ಪ್ರದೇಶದ ವಿಚಾರವನ್ನು ನಾವು ತೆಗೆದುಕೊಳ್ಳೋಣ. ಇವತ್ತು ಉತ್ತಮವಾದಂಥ ಭೂಮಿ ಇದ್ದಾಗ ಸಹಿತ ಈ ಭೂಮಿಯ ಫಲವತ್ತತೆಯನ್ನು ಕಳೆದುಕೊಳ್ಳುವಂಥದ್ದೂ ಕೂಡ ಇವತ್ತು ನಾವು ಕಾಣುತ್ತಿದ್ದೇವೆ. ಕಾಲುವೆ ಮೂಲಕ ನೀರಾವರಿಯನ್ನು ಎಷ್ಟು ಪಡೆಯುತ್ತಿದ್ದಾರೆ. ಯಾವ ಬೆಳೆಯನ್ನು ಯಾವ ಪ್ರದೇಶಗಳಲ್ಲಿ ಬೆಳೆಯುತ್ತಿದ್ದಾರೆ, ಆ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆಯಲಿಕ್ಕೆ ಸಾಧ್ಯತೆ ಇದ್ದಾಗ ಸಹಿತ ಅದರ ಹೆಚ್ಚಿನ ಲಾಭಾಂಶ ರೈತನಿಗೆ ಸಿಗುತ್ತದೋ ಇಲ್ಲವೋ ಮತ್ತು ನೀರನ್ನು ರೈತ ಬಳಕೆ ಮಾಡುತ್ತಿದ್ದಾನೋ ಇಲ್ಲವೋ ನೋಡಬೇಕು. ಸರಿಯಾಗಿ ನೀರಾವರಿ ಇಲಾಖೆ ಕೆಲಸ ಮಾಡುತ್ತದೋ ಇಲ್ಲವೋ ಇದನ್ನೂ ಸಹಿತ ನಾವು ಗಮನಿಸಿಲ್ಲ. ಸ್ವತಂತ್ರ ರಾಷ್ಟ್ರವಾದ ಮೇಲೆ ರೈತನಿಗಾಗಿ ನೀರಾವರಿ ಯೋಜನೆಗಳನ್ನು ತಗೆದುಕೊಂಡು ಬಂದರು; ಒಂದು ಯೋಜನೆ ಇಲ್ಲಿಯವರೆಗೆ ಪೂರ್ಣವಾಗಿಲ್ಲ. ಕೃಷ್ಣಾ ಮತ್ತು ಮಲಪ್ರಭಾ ಬೇಸಿನ್ 1965ರಲ್ಲಿ

ಪ್ರಾರಂಭವಾಗಿದೆ. 1965ರಲ್ಲಿ ಪ್ರಾರಂಭವಾದ ಮಲಪ್ರಭಾ ನೀರಾವರಿ ಯೋಜನೆ ಅದರ ಎಸ್ಟಿಮೇಟ್ ಪ್ರಕಾರ 20 ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿತ್ತು. ಅದರಿಂದ ಎಷ್ಟು ನೀರಾವರಿ ಪ್ರದೇಶವಾಗುತ್ತದೆಂದರೆ 2 ಲಕ್ಷ 68 ಸಾವಿರ ಹೆಕ್ಟೇರ್ ಆ ಯೋಜನೆ ಆಗಬೇಕಾಗಿತ್ತು. ಅದು 7 ವರ್ಷಗಳಲ್ಲಿ ಮುಗಿದು 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ನೀರಾವರಿ ಭೂಮಿಯನ್ನಾಗಿ ಮಾಡಬೇಕಾಗಿತ್ತು. ಇವತ್ತು ರೈತನ ಹೊಲಕ್ಕೆ ನೀರು ಬಂದು ಬೆಳೆಗೆ ಹೆಚ್ಚು ಸಹಾಯವಾಗಬೇಕಾಗಿತ್ತು. ನಮ್ಮ ಯೋಜನೆಯ ಪ್ರಕಾರ, ಇವತ್ತು ಎಷ್ಟೋ ಎಕರೆಗೆ ನೀರಾವರಿಯಾಗ ಬೇಕಾಗಿತ್ತು, ಆದರೆ 32 ವರ್ಷಗಳು ಆದರೂ ಕೂಡ ಇಲ್ಲಿಯವರೆಗೆ ಪೂರ್ಣ ನೀರಾವರಿ ಆಗಿಲ್ಲ. ಈ ಯೋಜನೆಗೆ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 7 ವರ್ಷದಲ್ಲಿ ಮುಗಿಸಬೇಕಾಗಿತ್ತು. ಆದರೆ 32 ವರ್ಷಗಳಿಂದ 400 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಿದ್ದೇವೆ. ಆದರೆ 70 ಸಾವಿರ ಹೆಕ್ಟೇರ್ ಭೂಮಿಗೆ ಇನ್ನು ನೀರಾವರಿಯಾಗಬೇಕಾಗಿದೆ. ಈ ಯೋಜನೆ ಪೂರ್ಣವಾಗಬೇಕಾದರೆ. ನಮಗೆ ಈಗ ನೀರು ಬೇಕಾಗಿರುವುದರಿಂದ ಮಹದಾಯಿ ಯೋಜನೆಯನ್ನು, ಆದಷ್ಟು ಬೇಗ ಮಲಪ್ರಭಾಗೆ ಜೋಡಿಸುವಂತಹ ಕಾರ್ಯವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ನಾಗೇಗೌಡರಿಗೆ ಕೇಳಿಕೊಳ್ಳುತ್ತೇನೆ. ಹೇಗಾದರೂ ಮಾಡಿ ಆ ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸಿದರೆ, ಮಲಪ್ರಭಾ ಯೋಜನೆಯಿಂದ ಜನರಿಗೆ ಈಗ ನೀರು ಒದಗಬೇಕಾಗಿದೆ. ಆದ್ದರಿಂದ ಈ ಯೋಜನೆಯನ್ನು ಆದಷ್ಟು ಬೇಗ ಮುಗಿಸಬೇಕು. ಸರ್ಕಾರ ಈ ಯೋಜನೆಗೆ ಇಲ್ಲಿಯವರಗೆ ಏನು ವೆಚ್ಚ ಮಾಡಿದೆ. ಇದರ ಸದುಪಯೋಗದಿಂದ ರೈತನ ಅಭಿವೃದ್ಧಿಯ ಕನಸನ್ನು ನಾವು ಕಾಣುತ್ತಾ ಇದ್ದೇವೆ. ಈ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇವತ್ತು ನಮ್ಮ ಇಡೀ ಗ್ರಾಮಗಳಲ್ಲಿ ಎಲ್ಲಾ ಕಡೆ ನಿರುದ್ಯೋಗ ಸಮಸ್ಯೆಯನ್ನು ಕಾಣುತ್ತಿದ್ದೇವೆ. ಈ ಒಂದು ನಿರುದ್ಯೋಗ ಸಮಸ್ಯೆಯನ್ನು ಎದುರಿಸಲಿಕ್ಕೆ ನಮ್ಮ ಪ್ರಯೋಜನ ತೀವ್ರವಾಗಿ ಆಗಬೇಕು ಎಂಬುದು ನಮ್ಮ ಕನಸು.

(ಸದನವು 1-32ಕ್ಕೆ ಮುಕ್ತಾಯಗೊಂಡು ಪುನಃ ಮದ್ಯಾಹ್ನ 2-30 ಗಂಟೆಗೆ ಸಮಾವೇಶಗೊಳ್ಳುವುದು)

ಸದನವು 3-00 ಗಂಟೆಗೆ ಪುನಃ ಸಮಾವೇಶಗೊಂಡಿತು

ಉಪಾಧ್ಯಕ್ಷರು : (ಶ್ರೀ ಚಂದ್ರಶೇಖರ ಮಾಮನಿಯವರು) ಅಧ್ಯಕ್ಷ ಪೀಠದಲ್ಲಿದ್ದರು.

ಪ್ರಕಟಣೆ

ಉಪಾಧ್ಯಕರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 109ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 8-5-98ರಂದು ಮೈಸೂರು ಅರಮನೆ ಅರ್ಚನೆ ಮತ್ತು ವರ್ಗಾವಣೆ ವಿಧೇಯಕ 1998 ಅನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತು ಎಂದು ಈ ಮೂಲಕ ತಿಳಿಸುತ್ತಿದ್ದೇನೆ.